Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 07
July - 2026

## ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ ಸ್ಥಾಪನೆಯ 5 ವರ್ಷಗಳ ಭವ್ಯ ಸಂಭ್ರಮಾಚರಣೆ










ಸೌಹಾರ್ದ ಸಹಕಾರಿಗಳ ಸಂಖ್ಯೆ: 6802

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1768



**ಜಿ. ನಂಜನಗೌಡ**

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬಂಧುಗಳಿಗೆ ಹೃತ್ಪೂರ್ವಕ ನಮಸ್ಕಾರಗಳು. ಸಹಕಾರವು ಕೇವಲ ಆರ್ಥಿಕ ವ್ಯವಸ್ಥೆಯಲ್ಲ; ಅದು ಪರಸ್ಪರ ವಿಶ್ವಾಸ, ಸಹಭಾಗಿತ್ವ ಹಾಗೂ ಸಮಾನ ಅಭಿವೃದ್ಧಿಯ ಜೀವನಮೌಲ್ಯವಾಗಿದೆ. ಸಹಕಾರದ ತತ್ವವನ್ನು ಅಳವಡಿಸಿಕೊಂಡು ಸದಸ್ಯರ ವಿಶ್ವಾಸ, ಪಾರದರ್ಶಕ ಕಾರ್ಯವೈಖರಿ ಹಾಗೂ ಸೇವಾ ಬದ್ಧತೆಯನ್ನು ಬಂಡವಾಳ ವಾಗಿಟ್ಟುಕೊಂಡು ಸೌಹಾರ್ದ ಸಹಕಾರಿಗಳು ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ.

# ಸೌಹಾರ್ದ ಸಹಕಾರಿಗಳಿಂದ ಸಹಕಾರ ಬೆಳೆಯಲಿ – ಸದಸ್ಯರು ಸಮೃದ್ಧರಾಗಲಿ – ರಾಷ್ಟ್ರ ಅಭಿವೃದ್ಧಿ ಹೊಂದಲಿ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿ ಬಂಧುಗಳಿಗೆ ಹೃತ್ಪೂರ್ವಕ ನಮಸ್ಕಾರಗಳು. ಸಹಕಾರವು ಕೇವಲ ಆರ್ಥಿಕ ವ್ಯವಸ್ಥೆಯಲ್ಲ; ಅದು ಪರಸ್ಪರ ವಿಶ್ವಾಸ, ಸಹಭಾಗಿತ್ವ ಹಾಗೂ ಸಮಾನ ಅಭಿವೃದ್ಧಿಯ ಜೀವನಮೌಲ್ಯವಾಗಿದೆ. ಸಹಕಾರದ ತತ್ವವನ್ನು ಅಳವಡಿಸಿಕೊಂಡು ಸದಸ್ಯರ ವಿಶ್ವಾಸ, ಪಾರದರ್ಶಕ ಕಾರ್ಯವೈಖರಿ ಹಾಗೂ ಸೇವಾ ಬದ್ಧತೆಯನ್ನು ಬಂಡವಾಳವಾಗಿಟ್ಟುಕೊಂಡು ಸೌಹಾರ್ದ ಸಹಕಾರಿಗಳು ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ.

ಸದಸ್ಯರ ಹಿತಾಸಕ್ತಿ, ಪಾರದರ್ಶಕ ಆಡಳಿತ ಹಾಗೂ ಗುಣಮಟ್ಟದ ಸೇವೆಯೇ ಸೌಹಾರ್ದ ಸಹಕಾರಿಗಳ ಯಶಸ್ಸಿನ ಬುನಾದಿಯಾಗಿದೆ. ಹಾಗಾಗಿ ಕೇಂದ್ರ ಸಹಕಾರ ಸಚಿವಾಲಯವು ದಿನಾಂಕ 06 ಜುಲೈ 2026ರಂದು ತನ್ನ ಸ್ಥಾಪನೆಯ ಐದು ವರ್ಷಗಳನ್ನು ಪೂರ್ಣಗೊಳಿಸುತ್ತಿರುವುದು ಸಹಕಾರ ಕ್ಷೇತ್ರಕ್ಕೆ ಹೆಮ್ಮೆಯ ಕ್ಷಣವಾಗಿದೆ. ಈ ಸುವರ್ಣ ಸಂದರ್ಭದಲ್ಲಿ 29 ಜೂನ್ 2026ರಿಂದ 06 ಜುಲೈ 2026ರವರೆಗೆ ದೇಶದಾದ್ಯಂತ "ಸಹಕಾರ ಸಪ್ತಾಹ" (Cooperative Week) ಅನ್ನು ಆಚರಿಸಲಾಗುತ್ತಿದೆ. ಈ ಆಚರಣೆಯು ಸಹಕಾರ ಚಳುವಳಿಯ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುವುದರೊಂದಿಗೆ, ಸಹಕಾರಿ ಸಂಸ್ಥೆಗಳ ಸೇವೆ, ಸಾಧನೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಮಹತ್ವದ ವೇದಿಕೆಯಾಗಿ ಹೊರಹೊಮ್ಮುವಂತೆ "ಸಹಕಾರ ಸಪ್ತಾಹ" ಕಾರ್ಯಕ್ರಮ ಆಚರಣೆ ಮಾಡುವುದು ಸಹಕಾರಿಗಳ ಆದ್ಯ ಕರ್ತವ್ಯ.

ಇಂದಿನ ಸ್ಪರ್ಧಾತ್ಮಕ ಮತ್ತು ತಂತ್ರಜ್ಞಾನಾಧಾರಿತ ಯುಗದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಸೇವೆಯ ಜೊತೆಗೆ ಆರ್ಥಿಕ ಸದೃಢತೆ, ಪಾರದರ್ಶಕತೆ, ಡಿಜಿಟಲ್ ತಂತ್ರಜ್ಞಾನ ಅಳವಡಿಕೆ, ಉತ್ತಮ ಆಡಳಿತ ಹಾಗೂ ನಿಯಮಾನುಸಾರ ಕಾರ್ಯನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಸದಸ್ಯರಿಗೆ ವೇಗವಾದ, ವಿಶ್ವಾಸಾರ್ಹ ಮತ್ತು ಗುಣಮಟ್ಟದ ಸೇವೆಗಳನ್ನು ಒದಗಿಸುವ ಮೂಲಕ ಸಂಸ್ಥೆಗಳ ಮೇಲಿನ ವಿಶ್ವಾಸವನ್ನು ಇನ್ನಷ್ಟು ಬಲಪಡಿಸಬೇಕಾಗಿದೆ. ಹೊಸ ತಂತ್ರಜ್ಞಾನ, ವೃತ್ತಿಪರ ನಿರ್ವಹಣೆ ಮತ್ತು ಉತ್ತಮ ಆಡಳಿತ (Good Governance) ಭವಿಷ್ಯದ ಯಶಸ್ಸಿನ ಪ್ರಮುಖ ಆಧಾರಗಳಾಗಿವೆ.

2026–27ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಸಂಸ್ಥೆಯ ಕಳೆದ ಸಾಲಿನ ಕಾರ್ಯಚಟುವಟಿಕೆಗಳು, ಆರ್ಥಿಕ ಸಾಧನೆಗಳು ಹಾಗೂ ಪ್ರಗತಿಯನ್ನು ಅವಲೋಕಿಸುವುದರ ಜೊತೆಗೆ, ಮುಂದಿನ ಸಾಲಿನ ಅಭಿವೃದ್ಧಿ ಕಾರ್ಯಯೋಜನೆಗಳನ್ನು ರೂಪಿಸಲು ಮಹತ್ವದ ಅವಕಾಶವಾಗಿದೆ. ಸದಸ್ಯರ ಅಮೂಲ್ಯ ಸಲಹೆಗಳು & ಸಕ್ರಿಯ ಸಹಭಾಗಿತ್ವ, ಆಡಳಿತ ಮಂಡಳಿಯ ಸಮರ್ಥ ನಾಯಕತ್ವ – ದೂರದೃಷ್ಟಿಯ ನಿರ್ಧಾರಗಳು, ಹಾಗೂ ಸಿಬ್ಬಂದಿಯ ಸಮರ್ಪಿತ ನಿಷ್ಠಾಪೂರ್ವಕ ಸೇವೆ ಇವೆಲ್ಲವೂ ಸಂಸ್ಥೆಯ ಅಭಿವೃದ್ಧಿಗೆ ಭದ್ರ ಬುನಾದಿಯಾಗಿ ಸಹಕಾರಿ ಸಂಸ್ಥೆಯ ನಿರಂತರ ಪ್ರಗತಿ ಮತ್ತು ಯಶಸ್ಸಿಗೆ ನಾವೆಲ್ಲರೂ ಪ್ರೇರಕ ಶಕ್ತಿಯ ಆಧಾರಸ್ತಂಭಗಳಾಗೋಣ.

ನಮ್ಮ ಸೌಹಾರ್ದ ಸಹಕಾರಿಯು ಸದಸ್ಯರ ನಿರೀಕ್ಷೆಗಳಿಗೆ ತಕ್ಕ ಗುಣಮಟ್ಟದ ಸೇವೆಗಳನ್ನು ಒದಗಿಸುತ್ತಾ, ವಿಶ್ವಾಸ, ಬದ್ಧತೆ ಮತ್ತು ನವೀನ ಚಿಂತನೆಯೊಂದಿಗೆ ಮತ್ತಷ್ಟು ಪ್ರಗತಿಯತ್ತ ಸಾಗಬೇಕಾಗಿದೆ. ಸಹಕಾರದ ತತ್ವಗಳನ್ನು ಅನುಸರಿಸುವ ಮೂಲಕ ಸಮಾಜದ ಸಮಗ್ರ ಅಭಿವೃದ್ಧಿಗೆ ಹಾಗೂ ರಾಷ್ಟ್ರದ ಪ್ರಗತಿಗೆ ಸೌಹಾರ್ದ ಸಹಕಾರಿ ಪರಿವಾರದ ನಾವೆಲ್ಲರೂ ಕೈಜೋಡಿಸೋಣ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಸೂರ್ಯಕಾಂತ ರ್‍ಯಾಕಲೆ
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ .......... 2
ಸಂಪಾದಕೀಯ .......... 3
ಜ್ಞಾನ ಜ್ಯೋತಿ .......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05–21
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 22–25
**ಲೇಖನಗಳು :**
ಆದಾಯ ತೆರಿಗೆ ಕಾಯ್ದೆ, 2025 ರ ಪ್ರಕಾರ ಸಹಕಾರ ಸಂಘಗಳಲ್ಲಿ ನಡೆಸಲಾಗುವ ನಗದು ವಹಿವಾಟುಗಳ ಮಿತಿಗಳು .......... 26–27
ಡಿಜಿಟಲ್ ಸಹಕಾರಿಗಳು, ಡಿಜಿಟಲ್ ಭಾರತ ತಂತ್ರಜ್ಞಾನವನ್ನು ಕಟ್ಟ ಕಡೆಯ ಗ್ರಾಮದವರೆಗೆ ತಲುಪಿಸುವಿಕೆ .......... 28–29
ಸರ್ಕಾರ ಮತ್ತು ನಿಬಂಧಕರು, ಸೌಹಾರ್ದ ಆಂದೋಲನಕ್ಕೆ ಪ್ರೋತ್ಸಾಹ ನೀಡಬೇಕು ........ .......... 30–32

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳು ಖಾಸಗಿ ಹಣಕಾಸು ಸಂಸ್ಥೆಗಳಿಗಿಂತ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಸದಸ್ಯರು ಸಾಲಬಾಧೆಯಿಂದ ಮುಕ್ತರಾಗುವಂತೆ ಕ್ರಮವಿಡಬೇಕು.

ರಾಜ್ಯದ ಸೌಹಾರ್ದ ಸಹಕಾರಿಗಳ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿದ ರಾಜ್ಯದ ಮಾನ್ಯ ಸಹಕಾರ ಸಂಘಗಳ ನಿಬಂಧಕರಾದ ಡಾ. ವೆಂಕಟೇಶ ಎಂ. ವಿ ರವರು ಸೌಹಾರ್ದ ಸಹಕಾರಿ ಕ್ಷೇತ್ರ ಈ ರಾಜ್ಯದಲ್ಲಿ ಉತ್ತಮವಾಗಿ ಬೆಳೆಯುತ್ತಿದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಉದ್ದಗಲಕ್ಕೂ ಬೆಳೆದಿರುವ ಈ ಕ್ಷೇತ್ರ ರಾಜ್ಯದ ಸೌಹಾರ್ದ ಸಹಕಾರಿಗಳ ಸದಸ್ಯರು ಸಾಲಬಾಧೆಯಿಂದ ನರಳುವಂತಾಗದಂತೆ ಸೌಹಾರ್ದ ಸಹಕಾರಿಗಳು ಹೆಚ್ಚಿನ ಸಾಲ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಒದಗಿಸಲು ಕ್ರಮವಿಡುವುದು ಅಗತ್ಯ ಎಂದಿರುವುದು ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಪ್ರೋತಾಹವನ್ನು ನೀಡಿದಂತಾಗಿದೆ.

ಸಹಕಾರಿಗಳು ಸಮಾಜದ ಹಲವಾರು ಮೂಲಗಳಿಂದ ಸಾಲ ಪಡೆಯುತ್ತಾರೆ. ಶೋಷಣೆಗೆ ಒಳಗಾಗುತ್ತಿರುವುದು ಸಾಮಾನ್ಯ. ಹಾಗೆಯೇ ಸಹಕಾರಿ ಸಂಸ್ಥೆಗಳಿಂದಲೂ ಸಾಲ ಪಡೆಯುತ್ತಾರೆ. ಆದರೆ ಇಲ್ಲಿ ಗಮನಿಸಬಹುದಾದ ಮುಖ್ಯ ವಿಷಯವೆಂದರೆ ಸಾಲ ಪಡೆದಾದ ಮೇಲೆ ಸದಸ್ಯರು ಸಂಘದ ಕಾರ್ಯಚಟುವಟಿಕೆಗಳಿಂದ ದೂರ ಉಳಿದು ಬಿಡುವುದು ಸಾಮಾನ್ಯ. ಖಾಸಗಿ ಹಣಕಾಸು ಸಂಸ್ಥೆಯವರು ಅವರಿಗೆ ಸಾಲ ವಸೂಲಾತಿಗೆ ಅನೇಕ ಆಮಿಷಗಳ ಜೊತೆಗೆ ಸಾಲ ಮರುಪಾವತಿಯ ಒತ್ತಡಗಳನ್ನು ಹೇರುವುದು ಸಹಜ. ಹೀಗಾಗಿ ಸಹಕಾರಿಗಳ ಸದಸ್ಯರುಗಳಿಗೆ ಸಂಘದ ಸಾಲ ಮರುಪಾವತಿಗೆ ಆದ್ಯತೆ ಇರುವುದಿಲ್ಲ.

ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು, ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುವುದು ಅಗತ್ಯ. ಸದಸ್ಯರ ಹಿತಚಿಂತಕರಾಗಿ ಸದಸ್ಯರು ಸಹಕಾರಿಯಲ್ಲಿ ಸಾಲ ಪಡೆಯುವ ಮುನ್ನ ಬೇರೆ ಯಾವ ಯಾವ ಖಾಸಗಿ ಹಣಕಾಸು ಸಂಸ್ಥೆಗಳಿಂದ ಹಾಗೂ ಬೇರೆ ಯಾವ ಯಾವ ಉದ್ದೇಶಗಳಿಗಾಗಿ ಸಾಲ ಪಡೆದಿದ್ದಾನೆ. ಸಾಲ ಪಡೆಯಲು ಅವನ ಯೋಜನೆಗಳೇನು? ಅವನ ಮರುಪಾವತಿ ಶಕ್ತಿ ಇವುಗಳ ಅಧ್ಯಯನ ಮಾಡುವುದು ಅಗತ್ಯ. ಅದರಂತೆ ಖಾಸಗಿ ಹಣಕಾಸು ಸಂಸ್ಥೆಯವರು ನೀಡುವ ಸೌಲಭ್ಯಗಳು ಆಕರ್ಷಣೆಗಳು ಇವೆಲ್ಲವುಗಳನ್ನು ಗಮನಿಸಿ ಅದಕ್ಕಿಂತ ಹೆಚ್ಚಿನ ಸೌಲಭ್ಯಗಳನ್ನು ಸಹಕಾರಿಗಳು ನೀಡಲು ಮುಂದಾಗುವುದು ಅವಶ್ಯಕ. ಸಹಕಾರಿಗಳ ಸದಸ್ಯರು ಸಾಲ ಬಾಧೆಯಿಂದ ಹೊರಬಂದು ನೆಮ್ಮದಿಯಿಂದ ಜೀವನ ಸಾಗಿಸುವಲ್ಲಿ ಸಹಕಾರಿ ಪಾತ್ರ ಮಹತ್ವದ್ದಾಗಬೇಕು ಎಂಬುದು ಮಾನ್ಯ ನಿಬಂಧಕರ ಹಾಗೂ ರಾಜ್ಯದ ಸಹಕಾರಿಗಳ ಆಶಯ. ಈ ಆಶಯಕ್ಕೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸ್ಪಂದಿಸುವಿರಾಗಿ ಆಶಿಸಲಾಗಿದೆ.

# ಜ್ಞಾನ ಜ್ಯೋತಿ



– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ದೂರದೃಷ್ಟಿ"

ಭಾಗ–2

ನಮ್ಮ ಜೀವನದ ಯಾವುದೇ ಕಾರ್ಯಕ್ಷೇತ್ರದಲ್ಲಿ ನಾವು ಇಡುವ ಮೊದಲನೆಯ ಹೆಜ್ಜೆ ಬಹಳ ಮಹತ್ವದ್ದಾಗಿರುತ್ತದೆ. ಸರಿಯಾದ ನಿರ್ಣಯ ತೆಗೆದುಕೊಂಡು ಸರಿಯಾದ ಹೆಜ್ಜೆಯನ್ನು ಇಟ್ಟಾಗ ಮಾತ್ರ ನಾವು ನೆಮ್ಮದಿಯಿಂದಿರುತ್ತೇವೆ. ಇಲ್ಲದಿದ್ದರೆ ಕಷ್ಟ–ನಷ್ಟ ಎದುರಿಸಬೇಕಾಗುತ್ತದೆ. ಕೇವಲ ಐದಾರು ದಶಕಗಳ ಹಿಂದೆ ನಮ್ಮ ದೇಶದ ಜನಸಂಖ್ಯೆ ಮೂವತ್ತು ಕೋಟಿ ಇತ್ತು. ಇಂದು ನೂರಾ ಇಪ್ಪತ್ತೆಂಟು ಕೋಟಿ ದಾಟುತ್ತಿದೆ. ನಮ್ಮ ದೇಶದ ಎಲ್ಲ ಸಮಸ್ಯೆಗಳ ಮೂಲ ಕಾರಣ ಜನಸಂಖ್ಯೆ ಎನ್ನುವಂತಾಗಿದೆ.

ಹಿಂದಿನ ಕಾಲದಲ್ಲಿ ಮದುವೆಗೆ ಮುಂಚೆ ಗಂಡು – ಹೆಣ್ಣು ಮನೆನೋಡಲು ಹೋಗುತ್ತಿದ್ದರು. ಅಲ್ಲದೆ ಹೇಳದೆ ಕೇಳದೆ ಹೋದರೆ ಅವರ ನಿಜಸ್ವರೂಪ ಗೊತ್ತಾಗುತ್ತದೆ ಎನ್ನುತ್ತಿದ್ದರು. ಆದರೆ ಇಂದು ಕನ್ನೆನೋಡಲು, ವರನೋಡಲು ಹೋಗುತ್ತೇವೆ ಎನ್ನುತ್ತಾರೆ. ಗಂಡು ಹೆಣ್ಣಿನ ಬಣ್ಣದ ಮೇಲೆ ಬದುಕು ನಿಂತಿಲ್ಲ. ಬದುಕು ಅತ್ಯಂತ ಜಟಿಲವಾಗಿದೆ. ಅದನ್ನು ತುಂಬಾ ಸೂಕ್ಷ್ಮವಾಗಿ ಅವಲೋಕನ ಮಾಡಿ ನಡೆಯಬೇಕಾಗುತತದೆ. ಹಾಗಲ್ಲದೆ ಬರೀ ಹೊರಗಿನ ಬಣ್ಣನೋಡಿ ಮದುವೆ ಮಾಡಿದರೆ ಆ ಬಣ್ಣ ಯಾವಾಗ ಕೆಡುತ್ತದೆ ಎಂದು ಹೇಳಲು ಬರುವುದಿಲ್ಲ. ಆದ್ದರಿಂದ ನಮ್ಮ ನಾಳಿನ ಬಾಳುವೆ ಇಂದಿನ ಬಾಳನ್ನು ಅವಲಂಬಿಸಿದೆ.

ತುಂಬಿ ನಿಂತ ಬಾವಿಯಲ್ಲಿ ಒಂದು ಕಲ್ಲು ಎಸೆದರೆ ಏನುಗಾತ್ತದೆ ? ಎಂದು ಕೆಲವರು ಕಲ್ಲು ಎಸೆಯುತ್ತಾರೆ. ಆದರೆ ಅದೇ ಒಂದು ಕಲ್ಲು ಒಂದರೆ ನಂತರ ಒಂದರಂತೆ ಅಸಂಖ್ಯೆ ತೆರೆಗಳನ್ನು ಎಬ್ಬಿಸಿ ಸಂಪೂರ್ಣ ಬಾವಿಯನ್ನು ಅಲ್ಲೋಲ ಕಲ್ಲೋಲ ಮಾಡುತ್ತದೆ. ಒಬ್ಬನು ಎತ್ತಿನ ಗಾಡಿಯನ್ನೇರಿ ಊರಿಂದೂರಿಗೆ ಹೊರಟಿದ್ದ. ಗಾಲಿಗೆ ಹಾಕಿದ ಎಣ್ಣೆ ಮುಗಿದಿದ್ದರಿಂದ ಅದು ಒಂದೇ ಸಮನೆ ಸದ್ದು ಮಾಡುತ್ತಿತ್ತು! ಆದರೆ ಗಾಡಿಯ ಮಾಲೀಕನು "ಇದೇನು ದೊಡ್ಡ ವಿಷಯ" ಎಂದು ಅಲಕ್ಷ್ಮ ಮಾಡಿದ್ದರಿಂದ ಗಾಡಿಯು ಒಂದೆರಡು ಮೈಲು ದೂರ ಕ್ರಮಿಸುವುದರೊಳಗಾಗಿ ಅದರ ಅಚ್ಚು ಮುರಿದು ನೆಲಕಚ್ಚಿತು.

ಹಿಟ್ಲರನ ತಲೆಯಲ್ಲಿ ಯುದ್ಧ ಮಾಡಿ ನೆರೆ ಹೊರೆಯವರನ್ನು ಗೆಲ್ಲಬೇಕೆಂಬ ಇಚ್ಛೆಯಾಯಿತು. ಹಿಟ್ಲರನಿಗೆ ಫ್ರಾನ್ಸ್ ದೇಶವನ್ನು ಗೆಲ್ಲುವಾಸೆ ಇತ್ತು. ಏಕೆಂದರೆ ನೆಪೋಲಿಯನ್ನನು ಜರ್ಮನಿ ಗೆದ್ದುಕೊಂಡಿದ್ದ. ಹಿಟ್ಲರನು ತೆಗೆದುಕೊಂಡಿದ್ದ ಒಂದು ನಿರ್ಣಯದಿಂದ ಆ ದೇಶವು ಐದು ವರ್ಷಗಳ ಕಾಲದವರೆಗೆ ಹೊತ್ತಿ ಉರಿಯುತ್ತಿತ್ತು! ಆದ್ದರಿಂದ ಒಂದು ಮನೆಯ ಯಜಮಾನರು ತೆಗೆದುಕೊಳ್ಳುವ ಒಂದು ಸಣ್ಣ ನಿರ್ಣಯವು ಇಡೀ ಕುಟುಂಬದ ಮೇಲೆಯೇ ಪ್ರಭಾವ ಬೀರುತ್ತದೆ. ಆದ್ದರಿಂದ ನಮ್ಮಲ್ಲಿ ದೂರದೃಷ್ಠಿ ಅಥವಾ ಅವಧಾನ ಇರಬೇಕಾದುದು ಅವಶ್ಯವಾಗಿದೆ. ರಾವಣನು ಭಿಕ್ಷೆಗೆ ಬಂದಾಗ ಏನೂ ಇಲ್ಲದ ಅರಣ್ಯದಲ್ಲಿ ಇವನೇಕೆ ಬಂದ ಎಂದು ಸೀತೆ ಯೋಚಿಸಲಿಲ್ಲ: ಪರಿಣಾಮವಾಗಿ ರಾಮಾಯಾಣ ವಾಯಿತು. ರಸ್ತೆಯಲ್ಲಿ ಯಾರೋ ತಗ್ಗು ತೆಗೆದರೆ ನಮಗೇನು ಸಂಬಂಧ ಎಂದರೆ ನಾಳೆ ಆ ತಗ್ಗಿನಲ್ಲಿ ಬೀಳುವವರು ನಾವೇ ವಿನಾ ಅವರಲ್ಲ!

ಒಂದು ಹಡಗಿನಲ್ಲಿ ಇಬ್ಬರು ಜಗಳಾಡಿದರು. ಒಬ್ಬನು 'ನಿನ್ನನ್ನು ಮುಗಿಸುತ್ತೇನೆ. ಎಂದು ಹೇಳಿ ಬೇರೆಯವನು ಮಲಗಿದಾಗ ಅವನ ಕೋಣೆಯಲ್ಲಿ ಒಂದು ರಂಧ್ರ ತೆಗೆದು ಬಂದ. ಬೆಳಗಾಗುವುದರಲ್ಲಿ ಹಡಗೇ ಮುಳುಗಿತ್ತು. ಇಬ್ಬರೂ ನೀರು ಪಾಲಾಗಿದ್ದರು. ಗಾಂಧೀಜಿಯವರು ಆಫ್ರಿಕಾ ದೇಶದಲ್ಲಿದ್ದರು. ಏನೋ ಕಾರಣಕ್ಕೆ ಗಾಂಧೀಜಿಯವರು ಕಸ್ತೂರಬಾರವರನ್ನು ಮನೆಯಿಂದ ಹೊರಗೆ ಹಾಕಿದರು. ಆಗ ಕಸ್ತೂರಬಾ ಹೇಳಿದರು "ಇದು ಪರದೇಶ, ನಾನೆಲ್ಲಿ ಹೋಗಬೇಕು? ಹೋದರೆ ಪೋಲೀಸ್ ಸ್ಟೇಷನ್ನಿಗೆ ಹೋಗಬೇಕು. ಆಗ ಯಾರ ಮರ್ಯಾದೆ ಹೋಗುತ್ತದೆ?" ಎಂದು ಕೇಳಿದಾಗ ಗಾಂಧೀಜಿಯವರು ತಕ್ಷಣ ತಮ್ಮ ತಪ್ಪಿನ ಅರಿವಾಗಿ ಮತ್ತೆ ಕಸ್ತೂರಬಾರವರನ್ನು ಮನೆಯೊಳಗೆ ಕರೆದುಕೊಂಡರಂತೆ. ಮಹಾತ್ಮರಿಗೇ ಹೀಗೆ ಮರವೆಯಾದರೆ ಸಾಮಾನ್ಯರ ಗತಿ ಏನು? ಆದ್ದರಿಂದ ನಾವು ದೂರದೃಷ್ಠಿ ಉಳ್ಳವರಾಗಿ ಬಾಳ ಬಟ್ಟೆಯಲ್ಲಿ ಜಾಗ್ರತೆಯಿಂದ ಹೆಜ್ಜೆಯಿಡಬೇಕು. ಆಗ ನಾವು ಸುರಕ್ಷಿತವಾಗಿ ನಮ್ಮ ಗುರಿ ತಲುಪುತ್ತೇವೆ. ನಾಳೆ ಸಾಲ ತೀರಿಸುವ ಹಾಗಿದ್ದರೆ ನಾವು ಎಂದು ಸಾಲ ಮಾಡಬೇಕು. ಇಲ್ಲದಿದ್ದರೆ ಅದರ ಬಡ್ಡಿ ಚಕ್ರಾಕಾರವಾಗಿ ತಿರುಗಿ ನಮ್ಮನ್ನೆ ಮುಗಿಸುತ್ತದೆ. ಆದ್ದರಿಂದ ದೂರದೃಷ್ಠಿಯುಳ್ಳವರಂಥವರು ಮಾತ್ರ ಬದುಕಿನಲ್ಲಿ ಪರಮಶಾಂತಿ ಪಡೆಯುತ್ತಾರೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಜೂನ್–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 919 | 619 | 444 | 298 | 2280 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 68 | 13 | 19 | 30 | 130 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 125 | 5 | 30 | 20 | 180 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 862 | 627 | 433 | 308 | 2230 |
| **ಜೂನ್ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 130 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 180** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7541 | 1455 | 2285 | 815 | 12096 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1124 | 263 | 561 | 206 | 2154 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6417 | 1192 | 1724 | 609 | 9942 |
| **ಜೂನ್ 2026ರ ತಿಂಗಳಿನಲ್ಲಿ ಒಟ್ಟು 105 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# 104ನೇ ಅಂತರರಾಷ್ಟ್ರೀಯ ಸಹಕಾರ ದಿನ - 04ನೇ ಜುಲೈ 2026

## 2026 ಧ್ಯೇಯ – "ಶಾಂತಿಯುತ ಜಗತ್ತಿಗೆ ಸಹಕಾರ ಸಂಸ್ಥೆಗಳು"

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡುತ್ತ ಬಂದಿದ್ದಾರೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಶಾಂತಿಯುತ ಜಗತ್ತಿಗೆ ಸಹಕಾರ ಸಂಸ್ಥೆಗಳು" ಎಂಬುದನ್ನು ದೃಢೀಕರಿಸಲು ಈ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

**International Day of Cooperatives 2026**

**Theme : "Cooperatives for a peaceful world!"**

## ಸಹಕಾರ ಸಂಘಗಳ ನಿಬಂಧಕರಾಗಿ ಡಾ. ವೆಂಕಟೇಶ ಎಂ.ವಿ ಐ.ಎ.ಎಸ್



**ಬೆಂಗಳೂರು** : ಸಹಕಾರಿ ಇಲಾಖೆಯ ಸಹಕಾರ ಸಂಘಗಳ ನಿಬಂಧಕರಾಗಿ ಅಧಿಕಾರವನ್ನು ಸ್ವೀಕರಿಸಿದ ಶ್ರೀ ಡಾ. ವೆಂಕಟೇಶ ಎಂ.ವಿ ಭಾ.ಆ.ಸೇ. ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ದಿನಾಂಕ 12.06.2026 ರಂದು ಸಹಕಾರಿಗಳ ನಿಬಂಧಕರ ಕಚೇರಿಯಲ್ಲಿ ಭೇಟಿಯಾಗಿ ಸೌಹಾರ್ದ ಸಹಕಾರಿ ಚಳುವಳಿ ಮತ್ತು ಸಂಯುಕ್ತ ಸಹಕಾರಿಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿ ಶುಭಾಶಯವನ್ನು ಕೋರಿದರು.

## ಸಹಕಾರಿ ಸಂಘಗಳ ನಿಬಂಧಕರಿಂದ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಪರಿಶೀಲನೆ



**ಬೆಂಗಳೂರು** : ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆ ದಿನಾಂಕ 23.06.2026 ರಂದು ರಾಜ್ಯದ ಸಹಕಾರಿ ಸಂಘಗಳ ಮಾನ್ಯ ನಿಬಂಧಕರಾದ ಡಾ. ವೆಂಕಟೇಶ್ ಎಂ ವಿ, ಭಾ.ಆ.ಸೇ ಇವರು ಸಂಯುಕ್ತ ಸಹಕಾರಿಯ ಸಮಗ್ರ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದರು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿಎ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಶ್ರೀ ಬಿ.ಎಸ್. ಗುಂಡುರಾವ್ ಹಾಗೂ ಸಂಯುಕ್ತ ಸಹಕಾರಿಯ ಪ್ರಾಂತೀಯ ಅಧಿಕಾರಿಗಳು, ಸಂಯುಕ್ತ ಸಹಕಾರಿಯ ಎಲ್ಲಾ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸಂಯುಕ್ತ ಸಹಕಾರಿಯ ಸಮಗ್ರ ಕಾರ್ಯಚಟುವಟಿಕೆಗಳನ್ನು ಪಿಪಿಟಿ ಮೂಲಕ ಪ್ರಸ್ತುತ ಪಡಿಸಿದರು.

ಸಹಕಾರಿ ಸಂಘಗಳ ನಿಬಂಧಕರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದ ನಂತರ ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಉತ್ತಮವಾಗಿ ಬೆಳೆದಿದೆ ಇದನ್ನು ಇನ್ನೂ ಹೆಚ್ಚು ಗುಣಾತ್ಮಕವಾಗಿ ಬೆಳೆಯುವಂತೆ ಕ್ರಮವಿಡಬೇಕು. ಸೌಹಾರ್ದ ಸಹಕಾರಿಗಳು ಖಾಸಗಿ ಹಣಕಾಸು ಕಂಪನಿಗಳಿಗಿಂತ ಉತ್ತಮ ಸೇವೆ ಒದಗಿಸಿ ಶೋಷಿತರನ್ನು ಶೋಷಣೆಯಿಂದ ಹೊರತರಬೇಕು. ಸಮಾಪನೆ ಕಾರ್ಯಗಳು ವೇಗವಾಗಿ ನಡೆಯಬೇಕು ಹಾಗೂ 4ಜಿ ವೇಗದಲ್ಲಿ ಕೆಲಸ ನಿರ್ವಹಿಸಬೇಕು ಎಂದು ಕರೆ ನೀಡಿದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ನಡೆದ ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮ



ಉದ್ಘಾಟನೆ



ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಹಕಾರಿಗಳು ಹಾಗೂ ಅಧಿಕಾರಿಗಳು

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಿನಾಂಕ 23 & 24ಜೂನ್ 2026 ರಂದು ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ" ಕಾರ್ಯಕ್ರಮನ್ನು "ಸೌಹಾರ್ದ ಸಹಕಾರಿ ಸೌಧ" ಮಲ್ಲೇಶ್ವರ ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

**ಸಾಂಪ್ರದಾಯಿಕತೆಯಿಂದ ಆಧುನಿಕತೆಯತ್ತ ಸಾಗಬೇಕು : ಶ್ರೀ ಜಿ. ನಂಜನಗೌಡ ಸಿಎ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.** ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಇವರು ರಾಜ್ಯದ ಸೌಹಾರ್ದ ಸಹಕಾರಿಗಳಿಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು. ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡು ಉತ್ತಮವಾಗಿ ಹಾಗೂ ಪ್ರಾಮಾಣಿಕವಾದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು, ನಂಬಿಕೆ ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಬೇಕು. ಸಮಾಜದ ಮುಖ್ಯವಾಹಿನಿಯಾಗಿ ಕಾರ್ಯನಿರ್ವಹಿಸಬೇಕು. ಠೇವಣಿದಾರರ ಹಿತಾಸಕ್ತಿ ಗಮನದಲ್ಲಿರಬೇಕು ಅಂದಾಗ ಮಾತ್ರ ಸಂಸ್ಥೆಗಳು ಬೆಳವಣಿಗೆಗೆ ಸಾಧ್ಯವಾಗುತ್ತದೆ ಎಂದು ಹೇಳಿದರು.

**ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ಚನ್ನಾಗಿ ಬೆಳೆದಿದೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ : ಡಾ. ವೆಂಕಟೇಶ್ ಎಂ ವಿ, ಭಾ.ಆ.ಸೇ, ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು.** ಇವರು ರಾಜ್ಯದಲ್ಲಿ ಹಲವಾರು ರೀತಿಯ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿ ಸಂಸ್ಥೆಗಳು ರಾಜ್ಯದಲ್ಲಿ ಉತ್ತಮವಾದ ಕೆಲಸವನ್ನು ನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಹಾಗೂ ಸೌಹಾರ್ದ ಸಹಕಾರಿ ಸಂಸ್ಥೆಗಳು ಸಮಾಜಕ್ಕೆ ಪೂರಕವಾಗಬೇಕು, ರಾಜ್ಯದಲ್ಲಿ ಬಡವರಿಗೆ ಹಾಗೂ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ನೀಡಿ ಆರ್ಥಿಕ ಬೆಳವಣಿಗೆಗೆ ಸಹಾಯಕವಾಗಬೇಕು ರಾಜ್ಯದಲ್ಲಿ, ದೇಶದಲ್ಲಿ ಮಾದರಿ ಸೌಹಾರ್ದ ಸಹಕಾರಿ ಸಂಸ್ಥೆಗಳಾಗಬೇಕು ಎಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

**ಎಲ್ಲರೂ ಸೇರಿ ಅಭಿವೃದ್ಧಿ ಸಾಧಿಸೋಣ : ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.** ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಇವರು ಮಾತನಾಡಿ ಸೌಹಾರ್ದ ಸಹಕಾರಿಗಳ ಕಾರ್ಯ ವೈಖರಿ ಸಮಾಜಕ್ಕೆ ಉತ್ತಮ ಸಕರಾತ್ಮಕ ಸಂದೇಶವನ್ನು ನೀಡಬೇಕು ಇದು ಡೆಟಾಯುಗ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬೇಕು. ಪ್ರತಿಯೊಂದು ಕಾರ್ಯವು ವ್ಯಾಲೂ ಆಡಿಶನ್ ಆಗಬೇಕು ಉದ್ಯೋಗ ಸೃಷ್ಠಿಯಾಗಬೇಕು ಎಲ್ಲರೂ ಸೇರಿ ಅಭಿವೃದ್ಧಿ ಸಾಧಿಸೋಣ ಎಂದು ಕರೆ ನೀಡಿದ್ದರು. ಹಾಗೂ ಶ್ರೀ ಬಿ.ಎಸ್. ಗುಂಡುರಾವ್. ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಇವರು ಉಪಸ್ಥಿತರಿದ್ದರು.

**ಸಂಸ್ಥೆಗಳಲ್ಲಿ ನಿರ್ದೇಶಕರ ಪಾತ್ರ ಮಹತ್ವದು : ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.** ಇವರು ರಾಜ್ಯದ ಸೌಹಾರ್ದ ಸಂಸ್ಥೆಗಳಲ್ಲಿ ನಿರ್ದೇಶಕರುಗಳು ತಮ್ಮ ಆಡಳಿತ ಮಂಡಳಿಯ ಸದಸ್ಯರ ಜೊತೆ ಹಾಗೂ ಸಿಬ್ಬಂದಿಯವರೊಂದಿಗೆ ಉತ್ತಮವಾದ ಸಂಬಂಧವನ್ನು ಹೊಂದಿ ಸಂಸ್ಥೆಯ ಬೆಳವಣಿಗೆ ಪೂರಕವಾಗಬೇಕು ಅದಕ್ಕಾಗಿ ಅವರ ಹೆಚ್ಚಿನ ಅಗತ್ಯವಿರುತ್ತದೆ ಎಂದು ವಿಷಯವನ್ನು ತಿಳಿಸಿದರು. ಅದಕ್ಕಾಗಿ ಈ ತರಬೇತಿ ಕಾರ್ಯಕ್ರಮವು ಅತ್ಯಗತ್ಯವಾಗಿರುತ್ತದೆ ಎಂದು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಾದ ಶ್ರೀ ಉಮೇಶ್, ಶ್ರೀ ಶಶಿಧರ್ ಹಾಗೂ ಉಪ ನಿಬಂಧಕರಾದ ಶ್ರೀಮತಿ ಕವಿತ, ಇವರು ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಚ್ ಎಸ್ ನಾಗರಾಜಯ್ಯ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ) ಬೆಂಗಳೂರು, ಇವರು ಉಪಸ್ಥಿತರಿದ್ದರು.



ಮಾನ್ಯ ಸಹಕಾರಿಗಳ ನಿಬಂಧಕರಾದ ಡಾ. ವೆಂಕಟೇಶ್ ಎಂ ವಿ, ಭಾ.ಆ.ಸೇ ಇವರಿಗೆ ಸನ್ಮಾನ



ಸಂವಾದ ಕಾರ್ಯಕ್ರಮ

**ಈ ತರಬೇತಿ ಕಾರ್ಯಕ್ರಮದಲ್ಲಿ ಅಳವಡಿಸಿರುವ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು :**

ಅವಧಿ 01 – ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಮತ್ತು ನಿರ್ದೇಶಕರ ಪಾತ್ರ ಶ್ರೀ ಹೆಚ್.ಎಸ್. ನಾಗರಾಜಯ್ಯ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.), ಬೆಂಗಳೂರು

ಅವಧಿ 02– ಸಹಕಾರಿ ನಾಯಕತ್ವ ಡಾ. ನಂದೀಶ ವಿ. ಹಿರೇಮಠ ಮಾನ್ಯ ಪ್ರಾಧ್ಯಾಪಕರು & ಡೀನ್ ಸ್ಟ್ರಟಿಜಿಕ್ ಪಾರ್ಟ್ನರ್‌ಶಿಫ್ & ಕೊಲ್ಯಾಬರೇಷನ್ಸ್, ಈಬಿಐ ಮತ್ತು ಕಾರ್ಪೋರೇಟ್ ಟ್ರೇನರ್, ಬೆಂಗಳೂರು.

ಅವಧಿ 03 – ಸೌಹಾರ್ದ ಸಹಕಾರಿಗಳಲ್ಲಿ ವ್ಯಾಪಾರ ಅಭಿವೃದ್ಧಿಯಲ್ಲಿ ನಿರ್ದೇಶಕರ ಪಾತ್ರ ಶ್ರೀ ಗುರುಸ್ವಾಮಿ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ.) ಬೆಂಗಳೂರು.

ಅವಧಿ 04 – ತಂತ್ರಾಂಶ ದುರ್ಬಳಕೆ ತಡೆಗಟ್ಟುವಲ್ಲಿ ನಿರ್ದೇಶಕರ ಪಾತ್ರ ಶ್ರೀ ಜಗದೀಶರಾಮ, ಮಾನ್ಯ ತರಬೇತುದಾರರು ಮಂಗಳುರು.

ಅವಧಿ 05 – ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಮಾನವೀಯ ಮೌಲ್ಯಗಳು ಶ್ರೀಮತಿ ಮೀನಾಕ್ಷಿ ಖಂಡಿಮಠ ಮಾನ್ಯ ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ತುಮಕೂರು ವಿಶವಿದ್ಯಾಲಯ, ತುಮಕೂರು.

**ಸಂವಾದ ಕಾರ್ಯಕ್ರಮ :**

ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರೊಂದಿಗೆ ಸಂವಾದ ಕಾರ್ಯಕ್ರಮ

1. ಶ್ರೀ ಕೆ.ಎನ್. ಶಶಿಧರ್, ಮಾನ್ಯ ಅಧಕ್ಷರು ತುಮಕೂರು ಸಿಟಿ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., ತುಮಕೂರು.
2. ಶ್ರೀ ಎ. ಸುರೇಶ ರೈ ಮಾನ್ಯ ಅಧಕ್ಷರು, ಒಡಿಯೂರು ಶ್ರೀ ವಿವಿದೋದ್ಧೇಶ ಸೌಹಾರ್ದ ಸಹಕಾರಿ ಸಂಘ ನಿ,. ದಕ್ಷಿಣ ಕನ್ನಡ
3. ಶ್ರೀ ರವೀಂದ್ರ ಯಲಿಗಾರ ಮಾನ್ಯ ನಿರ್ದೇಶಕರು ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ಸಂಘ ನಿ,. ಧಾರವಾಡ
4. ಶ್ರೀ ಎಂ ಬಸಪ್ಪ ಮಾನ್ಯ ಅಧಕ್ಷರು ನಗರೇಶ್ವರ ಸೌಹಾರ್ದ ಸಹಕಾರಿ ನಿ,. ಬೆಂಗಳೂರು.
5. ಶ್ರೀಮತಿ ಬಿ.ಎನ್ ನಾಗಮಣಿ ಮಾನ್ಯ ಅಧಕ್ಷರು ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು.

ಕಾರ್ಯಕ್ರಮದ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ. ಹೆಚ್ ನಡೆಸಿಕೊಟ್ಟರು. ಶ್ರೀಮತಿ ಹರ್ಷಪ್ರಭಾ ಇವರು ಪ್ರಾರ್ಥಿಸಿದರು ಹಾಗೂ ನಿರೂಪಣೆಯನ್ನು ತರಬೇತಿ ವಿಭಾಗದ ಅಧಿಕಾರಿಯಾದ ಶ್ರೀಮತಿ ಕವಿತಾ ಆರ್ ಹಾಗೂ ವಂದನಾರ್ಪಣೆಯನ್ನು ಶ್ರೀ ವಿ.ಜೆ ಕಾರಕೂನ್, ತರಬೇತಿ ಸಲಹೆಗಾರರು ಇವರು ನಡೆಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ 96 ಸೌಹಾರ್ದಗಳಿಂದ 146 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಭಿನಂದನಾ ಕಾರ್ಯಕ್ರಮ



**ಬೆಂಗಳೂರು** : ಸಹಕಾರ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತಿಯಾದ ಶ್ರೀ ಬಾಲಶೇಖರ್ ರವರನ್ನು ಸಹಕಾರ ಸಂಘಗಳ ಕೇಂದ್ರ ಕಚೇರಿಯಲ್ಲಿ ಆಯೋಜಿಸಿದ್ದ ಸನ್ಮಾನ ಮತ್ತು ಅಭಿನಂದನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಭಾಗವಹಿಸಿ ಸನ್ಮಾನಿಸಿದರು, ಈ ಸಂದರ್ಭದಲ್ಲಿ ಮಾನ್ಯ ಸಹಕಾರ ಸಂಘಗಳ ನಿಬಂಧಕರಾದ ಡಾ|| ವೆಂಕಟೇಶ್ ಎಂ.ವಿ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಬೆಂಗಳೂರು ಪ್ರಾಂತದ ವ್ಯವಸ್ಥಾಪಕರಾದ ಶ್ರೀಧರ್, ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

## ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ 5 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ ಆಚರಿಸಲಾಗುತ್ತಿರುವ ಸಹಕಾರ ಸಪ್ತಾಹದ ಪ್ರಯುಕ್ತವಾಗಿ "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯದೊಂದಿಗೆ ದಿನಾಂಕ 29.06.2026 ರಿಂದ 06.07.2026ರ ವರೆಗೆ

## ಸಂಜೆ 05.00 ರಿಂದ 06.00ರ ವರೆಗೆ ಆನ್‌ಲೈನ್ ಸರಣಿ ಉಪನ್ಯಾಸ ಮಾಲಿಕೆ ವಿವರಗಳು

ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯ 5 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನಲೆಯಲ್ಲಿ ದಿನಾಂಕ 29.06.2026 ರಂದು ಸಹಕಾರಿ ನಾಯಕತ್ವ ಕುರಿತು ಡಾ. ನಂದೀಶ ವಿ ಹಿರೇಮಠ, ಮಾನ್ಯ ಪ್ರಾಧ್ಯಾಪಕರು ಮತ್ತು ಕಾರ್ಪೊರೇಟ್ ತರಬೇತುದಾರರು, ಬೆಂಗಳೂರು, ದಿನಾಂಕ 30.06.2026 ರಂದು ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಕುರಿತು ಡಾ. ಗುರುಸ್ವಾಮಿ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ), ಬೆಂಗಳೂರು, ದಿನಾಂಕ 01.07.2026 ರಂದು ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಕುರಿತು ಶ್ರೀ ಹೆಚ್. ಎಸ್. ನಾಗರಾಜಯ್ಯ ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಬೆಂಗಳೂರು, 02.07.2026 ರಂದು ಸಹಕಾರ ಕ್ಷೇತ್ರದ ಶಕ್ತಿ, ಸಾಮರ್ಥ್ಯ, ಸವಾಲುಗಳು ಹಾಗೂ ಅವಕಾಶಗಳು ಕುರಿತು ಡಾ. ಯಶವಂತ ಡೋಂಗ್ರೆ ಮಾನ್ಯ ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು, ದಿನಾಂಕ 03.07.2026 ರಂದು ಸಾಮಾಜಿಕ ಜಾಲತಾಣ ಹಾಗೂ ಮಾಧ್ಯಮದಲ್ಲಿ ಸಹಕಾರಿಗಳ ಪಾತ್ರ ಕುರಿತು ಶ್ರೀ ಅಮೃತ ಜೋಶಿ, ಮಾನ್ಯ ಪತ್ರಕರ್ತರು, ಹುಬ್ಬಳ್ಳಿ ದಿನಾಂಕ 04.07.2026 ರಂದು ಸಹಕಾರ ಕ್ಷೇತ್ರದ ಮೂಲಕ ಮಹಿಳಾ ಸಬಲೀಕರಣ ಕುರಿತು ಡಾ.ಎಸ್.ಎ. ಸಿದ್ಧಾಂತಿ ಮಾನ್ಯ ನಿರ್ದೇಶಕರು(ನಿ), ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು, ದಿನಾಂಕ 06.07.2026 ರಂದು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಡಿಜಿಟಲೈಶನ್ ಕುರಿತು ಶ್ರೀ ಜಗದೀಶ ರಾಮ ಮಾನ್ಯ ತರಬೇತುದಾರರು, ಮಂಗಳೂರು ಇವರುಗಳು ಉಪನ್ಯಾಸ ನೀಡಿದರು.

## ಹೊಸ 6 ತಿಂಗಳ ಡಿ.ಸಿ.ಬಿ.ಎಮ್ ಕೋರ್ಸ - 01 ಆಗಸ್ಟ್ 2026 ಪ್ರಾರಂಭ

ಸೌಹಾರ್ದ ಸಹಕಾರಿ ಸಿಬ್ಬಂದಿಯವರಿಗಾಗಿ ಹಾಗೂ ಯುವಕರಿಗಾಗಿ ಸಂಯುಕ್ತ ಸಹಕಾರಿಯು ಇದುವರೆಗೆ ನಡೆಸಿದ ಕೋರ್ಸ ಅನ್ನು ಮಾರ್ಪಡು ಮಾಡಿ ಎಂಟನೇ ತಂಡವನ್ನು 01 ಆಗಸ್ಟ್ 2026 ರಿಂದ ಪ್ರಾರಂಭಿಸಲಾಗುತ್ತಿದೆ.

**ಈ ಕೋರ್ಸ್‌ನ ವಿಶೇಷತೆಗಳು :**

1. ಡಿ.ಸಿ.ಬಿ.ಎಮ್ ಕೋರ್ಸ್ ಅವಧಿ 6 ತಿಂಗಳು.
2. ಈ ಕೋರ್ಸಿನ ಸಹಯೋಗ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು.
3. ಮಾನ್ಯತೆ ಹಾಗೂ ಪ್ರಮಾಣ ಪತ್ರ, ಅಂಕ ಪತ್ರ ಎನ್.ಸಿ.ಸಿ.ಟಿ ನವದೆಹಲಿ ಇವರಿಂದ ನೀಡಲಾಗುತ್ತದೆ.
4. ಪ್ರವೇಶ ಅರ್ಜಿ ಶುಲ್ಕ 100+ ಜಿಎಸ್.ಟಿ 18% =118.
5. ಕೋರ್ಸಿನ ಶುಲ್ಕ 8000 + ಜಿಎಸ್‌ಟಿ 18% (8000+1440=9440).
6. ಅರ್ಜಿ ಶುಲ್ಕ ಸೇರಿದಂತೆ ಒಟ್ಟು ಪಾವತಿಸಬೇಕಾದಂತಹ ಮೊತ್ತ ರೂ 9558/-ಅರ್ಜಿ ಶುಲ್ಕ ಮತ್ತು ಕೋರ್ಸ್ ಪ್ರವೇಶ ಶುಲ್ಕ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರಿಗೆ ಡಿಡಿ ಮೂಲಕ ಸಂದಾಯ ಮಾಡುವುದು. ಆನ್‌ಲೈನ್ ಪಾವತಿ ಮಾಡುವವರು IDBI BANK A/C NO: 0243102000014173, IFSC Code-IBKL 0000243, Branch- Malleshwaram. ಈ ಖಾತೆಗೆ ವರ್ಗಾಯಿಸುವುದು.
7. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 24.07.2026.
8. **ಅರ್ಜಿಯನ್ನು ಸಲ್ಲಿಸುವ ವಿಳಾಸ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 ಮತ್ತು 18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055."
9. ಸಹಕಾರಿ ಸಿಬ್ಬಂದಿಗಳಲ್ಲದೇ ಸಹಕಾರಿಯ ಯುವಕರು, ನಿರ್ದೇಶಕರು. ಸದಸ್ಯರು, ಸದಸ್ಯರಲ್ಲದ ಯುವಕರು ಸಹ ಈ ಕೋರ್ಸಿನ ಪ್ರವೇಶ ಪಡೆಯಲು ಅವಕಾಶವಿದೆ.
10. ಹೆಚ್ಚಿನ ವಿವರಗಳಿಗಾಗಿ ತರಬೇತಿ ಅಧಿಕಾರಿಗಳಾದ ಶ್ರೀ ಬಾಬು ಪಠಾಣ ದೂರವಾಣಿ ಸಂಖ್ಯೆ 9364702063 ಮತ್ತು ಶ್ರೀಮತಿ ಕವಿತ ಆರ್ ದೂರವಾಣಿ ಸಂಖ್ಯೆ 8884466722 ಇವರನ್ನು ಸಂಪರ್ಕಿಸಿ.
11. ಅರ್ಜಿ ನಮೂನೆಯನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಪ್ರಾಂತೀಯ ಕಛೇರಿ, ಜಿಲ್ಲಾ ಸಂಪರ್ಕ ಕಛೇರಿ ಮತ್ತು ಸಂಯುಕ್ತ ಸಹಕಾರಿಯ ವೆಬ್ ಸೈಟ್ www. souharda.coop ನಲ್ಲಿ ಪಡೆಯಬಹುದಾಗಿದೆ ಹಾಗೂ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ದೇವೇಗೌಡ ಪೆಟ್ರೋಲ್ ಬಂಕ್ ಹತ್ತಿರ, ಬೆಂಗಳೂರು ಇಲ್ಲಿಯೂ ಪಡೆಯಬಹುದಾಗಿದೆ.

# ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ ಸಂಯುಕ್ತ ಸಹಕಾರಿ ನೇತೃತ್ವದಲ್ಲಿ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮ

**ಬೆಂಗಳೂರು** : ಕೇಂದ್ರ ಸಹಕಾರ ಸಚಿವಾಲಯ ಸೂಚನೆಯ ಮೇರೆಗೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 29.06.2026 ರಿಂದ 06.07.2026ರವರೆಗೆ ಸಹಕಾರಿ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ. ಈ ಸಹಕಾರಿ ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಉಪನ್ಯಾಸವನ್ನು ಡಾ. ನಂದೀಶ ಹಿರೇಮಠ ಮಾನ್ಯ ಪ್ರಾಧ್ಯಾಪಕರು ಮತ್ತು ಕಾರ್ಪೋರೇಟ್ ತರಬೇತಿದಾರರು, ಬೆಂಗಳೂರು ಇವರು ಸಹಕಾರಿಯ ನಾಯಕತ್ವ ಎಂಬ ವಿಷಯದ ಕುರಿತು ಉಪನ್ಯಾಸ ನೀಡುವುದರ ಮೂಲಕ ಉದ್ಘಾಟನೆ ನೇರವೆರಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ಇವರು ವಹಿಸಿದರು. ಉದ್ಘಾಟನೆಯ ನಂತರ ಹಲವಾರು ಪ್ರತಿನಿಧಿಗಳ ಪ್ರಶ್ನೆಗಳಿಗೆ ಡಾ. ನಂದೀಶ ಹಿರೇಮಠ ರವರು ಉತ್ತರವನ್ನು ಕೊಟ್ಟು ಸಹಕಾರಿ ಕ್ಷೇತ್ರದ ಮಹತ್ವ ಬಗ್ಗೆ ವಿವರಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಪ್ರಾಸ್ತಾವಿಕ ಮಾತುಗಳನಾಡಿ ಸಹಕಾರ ಕ್ಷೇತ್ರದ ಬಗ್ಗೆ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದಕ್ಕೆ ಈ ಸಹಕಾರ ಸಪ್ತಾಹ ಆಚರಣೆ ಅತ್ಯಂತ ಪ್ರಯೋಜನಕಾರಿಯಾಗಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಈ ಆನ್‌ಲೈನ್ ಉಪನ್ಯಾಸ ಮಾಲಿಕೆಯಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಭಾಗವಹಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ಇವರು ಮಾತನಾಡಿದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರು ಒಂದು ನಾಣ್ಯದ ಎರಡು ಮುಖಗಳಿದಂತೆ ಯಾವುದೇ ಒಂದು ಭಾಗ ಸರಿಯಾಗಿ ಇರದಿದ್ದರೆ ನಾಣ್ಯ ಚಲಾವಣೆಯಾಗುವುದಿಲ್ಲ ಆದ್ದರಿಂದ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರು ಜೊತೆ ಜೊತೆಯಾಗಿ ಕಾರ್ಯನಿರ್ವಹಿಸುವುದು ಅಗತ್ಯ ಬೇರೆ ನಾಯಕರ ಉದಾಹರಣೆಯಿಂದ ನಾವೂ ಪ್ರೇರೆಪಿತರಾಗಬೇಕು ನಾವೇ ಒಬ್ಬ ಉತ್ತಮ ಸಹಕಾರಿ ನಾಯಕರಾಗಿ ಬೆಳೆಯಬೇಕು ಬೇರೆಯವರಿಗೆ ಮಾದರಿಯಾಗಬೇಕು ಎಂದು ತಿಳಿಸಿದರು ಹಾಗೂ ಭಾಗವಹಿಸಿದ ಪ್ರತಿನಿಧಿಗಳ ಬೇಡಿಕೆ ಮೇರೆಗೆ ಪ್ರತಿ ತಿಂಗಳಿಗೆ ಒಂದು ಆನ್‌ಲೈನ್ ಉಪನ್ಯಾಸದ ಬಗ್ಗೆ ಸಂಯುಕ್ತ ಸಹಕಾರಿ ಚಿಂತನೆ ಮಾಡುತ್ತಿದೆ ಮುಂದಿನ ದಿನಗಳಲ್ಲಿ ಸೂಕ್ತ ಕ್ರಮವಿಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದ ಸ್ವಾಗತ & ನಿರೂಪಣೆಯನ್ನು ಶ್ರೀಮತಿ ಕವಿತಾ ಆರ್. ಹಾಗೂ ವಂದನಾರ್ಪಣೆಯನ್ನು ಬಾಬು ಪಠಾಣ ನೆರವೇರಿಸಿದರು.



**ಬೆಂಗಳೂರು** : ಕೇಂದ್ರದಲ್ಲಿ ಸಹಕಾರ ಸಚಿವಾಲಯವು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯವಾಕ್ಯದೊಂದಿಗೆ ದೇಶದಾದ್ಯಂತ ಹಾಗೂ ರಾಜ್ಯದಾದ್ಯಂತ ಸಹಕಾರ ಸಪ್ತಾಹವನ್ನು (Co- Operative Week) ಅನ್ನು ಆಚರಿಸಲಾಗುತ್ತಿದೆ. ಇದರ ಭಾಗವಾಗಿ ದಿನಾಂಕ 30.06.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಸಹಕಾರ ಇಲಾಖೆ, ಬೆಂಗಳೂರು ಹಾಗೂ ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳ ಸಹಯೋಗದಲ್ಲಿ "ಸಹಕಾರ ಕ್ಷೇತ್ರ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಗಿಡ ನೆಡುವ ಅಬಿಯಾನ ಮತ್ತು ಜಾಗೃತಿ ಶಿಬಿರ"ವನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಗಿಡಕ್ಕೆ ನೇರೆರೆಯುವ ಮೂಲಕ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ರವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ವೇದಿಕೆಯ ಗಣ್ಯರನ್ನು ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ನಿವೃತ್ತಿಯಾಗಲಿದ್ದ ಸಹಕಾರ ಇಲಾಖೆಯ 1ನೇ ವಲಯದ ಮಾನ್ಯ ಉಪನಿಬಂಧಕರಾದ ಶ್ರೀ ಎಂ.ಪಿ. ಮಂಜುನಾಥ್ ರವರನ್ನು ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದ ನಂತರ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಲೆಕ್ಕಪರಿಶೋಧಕರಿಗೆ ಸಲ್ಲಿಸಬೇಕಾದ ದಾಖಲೆಗಳ ಬಗ್ಗೆ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ್ ಹೆಗ್ಡೆ ರವರು ಮಾಹಿತಿ ನೀಡಿದರು. ಸಿಬ್ಬಂದಿ ಸೇವಾ ನಿಯಮಗಳು, ಠೇವಣಾತಿ ಮತ್ತು ಸಾಲದ ನಿಯಮಗಳ ಕುರಿತಾಗಿ ಶ್ರೀ ಗುರುಸ್ವಾಮಿ, ಮಾನ್ಯ ಅಪರ ನಿಬಂಧಕರು (ನಿ,) ಇವರು ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ 67 ಸೌಹಾರ್ದ ಸಹಕಾರಿಗಳಿಂದ 87 ಪ್ರತಿನಿಧಿಗಳು ಭಾಗವಹಿಸಿದ್ದರು.



**ರಾಯಚೂರು** : ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯವು ತನ್ನ ಐದನೇ ವರ್ಷವನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ ದೇಶಾದ್ಯಂತ "ಸಹಕಾರ ಸಪ್ತಾಹ" (Cooperative Week) ಅನ್ನು "ಸಹಕಾರದಿಂದ ಸಮೃದ್ಧಿ" (Sahakar Se Samruddhi) ಎಂಬ ಧ್ಯೇಯದೊಂದಿಗೆ ಆಚರಿಸುತ್ತಿದೆ. ಈ ಅಂಗವಾಗಿ ಸಹಕಾರ ಕ್ಷೇತ್ರದ ಸಾಧನೆಗಳು, ಕೊಡುಗೆಗಳು ಹಾಗೂ ವಿವಿಧ ಉಪಕ್ರಮಗಳನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 03.07.2026 ರಂದು ಸಿಂಧನೂರಿನ ಕನಕದಾಸ ಕಲ್ಯಾಣ ಮಂಟಪದ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರಿನ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಅವರು ಸಸಿ ನೆಡುವ ಮೂಲಕ ಉದ್ಘಾಟಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಸಹಕಾರ ಚಳವಳಿಯು ಕೇವಲ ಆರ್ಥಿಕ ಅಭಿವೃದ್ಧಿಗೆ ಸೀಮಿತವಾಗದೆ, ಪರಿಸರ ಸಂರಕ್ಷಣೆ ಸೇರಿದಂತೆ ಸಮಾಜಮುಖಿ ಕಾರ್ಯಗಳಲ್ಲಿಯೂ ಮುಂಚೂಣಿಯಲ್ಲಿರಬೇಕು. ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದನ್ನು ಪೋಷಿಸುವ ಸಂಕಲ್ಪ ಮಾಡಬೇಕು" ಎಂದು ಕರೆ ನೀಡಿದರು.

ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ದೊಡ್ಡಬಸವರಾಜ ಅವರು ಮಾತನಾಡಿ, "ಸಹಕಾರ ಸಪ್ತಾಹದ ಅಂಗವಾಗಿ ಜಿಲ್ಲೆಯಾದ್ಯಂತ ವಿವಿಧ ಜಾಗೃತಿ ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪರಿಸರ ಸಂರಕ್ಷಣೆ ಮತ್ತು ಹಸಿರು ವಾತಾವರಣ ನಿರ್ಮಾಣಕ್ಕೆ ಎಲ್ಲ ಸಹಕಾರಿ ಸಂಸ್ಥೆಗಳು ಕೈಜೋಡಿಸಬೇಕು" ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ, ಶ್ರೀ ಹೆಚ್. ಜೆ. ಹನುಮಂತಯ್ಯ ಶೆಟ್ಟಿ, ಸಂಯುಕ್ತ ಸಹಕಾ–ರಿಯ ಮಾಜಿ ನಿರ್ದೇಶಕರಾದ ಶ್ರೀ ರಾಜಶೇಖರ್ ಬಿ., ಕಲಬುರಗಿ ಪ್ರಾಂತದ ಅಧಿಕಾರಿಗಳು, ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು.

---



**ತುಮಕೂರು** : ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ "ಸಹಕಾರದಿಂದ ಸಮೃದ್ಧಿ" ಎಂಬ ಧ್ಯೇಯವಾಕ್ಯದೊಂದಿಗೆ ದೇಶದಾದ್ಯಂತ ಸಹಕಾರ ಸಪ್ತಾಹವನ್ನು (Co-Operative Week) ಅನ್ನು ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ 30 ಜೂನ್ 2026ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರ ಕ್ಷೇತ್ರದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣಾ ಶಿಬಿರವನ್ನು ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ, ಎಸ್ಎಸ್‌ಪುರಂ ಶಾಖೆ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಸಂ–ಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್‌ರಾವ್ ರವರು, ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನಯ್ಯ ರವರು ಉಪಸ್ಥಿತರಿದ್ದರು. ಈ ಶಿಬಿರದಲ್ಲಿ 64 ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ತುಮಕೂರು** : ದಿನಾಂಕ 30.06.2026ರಂದು ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳಿಗಾಗಿ ಪ್ರವೇಶ ತರಬೇತಿಯನ್ನು ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ, ಎಸ್ಎಸ್‌ಪುರಂ ಶಾಖೆ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್‌ರಾವ್ ರವರು, ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನಯ್ಯ ರವರು, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವರುಣ್ ಭಟ್ ರವರು ಉಪಸ್ಥಿತರಿದ್ದರು. ಈ ತರಬೇತಿಯಲ್ಲಿ 52 ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

# ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ ರಾಜ್ಯದಾದ್ಯಂತ ಸಹಕಾರ ಸಪ್ತಾಹ ಆಚರಣೆ



**ಮೈಸೂರು** : ಕೇಂದ್ರ ಸಹಕಾರ ಸಚಿವಾಲಯವು ದಿನಾಂಕ 06.07.2026ರಂದು ತನ್ನ ಸ್ಥಾಪನೆಯ ಐದು ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಹಿನ್ನೆಲೆಯಲ್ಲಿ, ಸಹಕಾರ ಸಪ್ತಾಹ (Cooperative Week) ಪ್ರಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮತ್ತು ಮೈಸೂರು ಜಿಲ್ಲಾ ಸೌಹಾರ್ದ ಸಹಕಾರಿಗಳಿಂದ ಗಿಡ ನೆಡುವ ಕಾರ್ಯಕ್ರಮವನ್ನು ದಿನಾಂಕ: 30 ಜೂನ್ 2026 ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ, ಸರ್ಕಾರಿ ಪ್ರೌಡಶಾಲೆ, ಲಕ್ಷ್ಮೀಪುರಂ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದಲ್ಲಿ ಗಿಡ ನೆಡುವ ಅಭಿಯಾನಕ್ಕೆ ಚಾಲನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಶಿಕ್ಷಣ ಸಲಹಾ ಸಮಿತಿ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ರವರು ಗಿಡ ನೆಟ್ಟು ನೀರು ಹಾಕುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ಮಹದೇವಸ್ವಾಮಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮನೋಜ್‌ಕುಮಾರ್ ಎಸ್ ಹೆಚ್ ರವರು ಹಾಗೂ ಸರ್ಕಾರಿ ಪ್ರೌಡಶಾಲೆ, ಲಕ್ಷ್ಮೀಪುರಂ ಇದರ ಮುಖ್ಯೋಪಾಧ್ಯಾಯರಾದ ಶ್ರೀಮತಿ ಮೀನಾಕುಮಾರಿರವರು ಉಪಸ್ಥಿತ–ರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯಾದ ಸುರೇಶ ಆರ್ ಎಸ್ ಇವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಒಕ್ಕೂಟದ ಆಡಳಿತ ಮಂಡಲಿ ಸದಸ್ಯರು, ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿದಂತೆ 42 ಜನ ಭಾಗವಹಿಸಿದ್ದರು.



**ಗದಗ** : ಕೇಂದ್ರ ಸಹಕಾರ ಸಚಿವಾಲಯ 5 ಐದು ವರ್ಷ ಪೂರ್ಣಗೊಳ್ಳುತ್ತಿರುವ ಸುಸಂದರ್ಭದಲ್ಲಿ ಸಹಕಾರ ಸಪ್ತಾಹ ಆಚರಣೆಯನ್ನು ಗದಗ ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ., ಮಲ್ಲಸಮುದ್ರದಲ್ಲಿ ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಸಹಕಾರ ಮಹಾಮಂಡಳ ನಿ., ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಸಹಕಾರ ಕಾಯ್ದೆ ತಿದ್ದುಪಡಿ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಚಂದ್ರಗೌಡ ಪಾಟೀಲ ಪ್ರಾ.ಕೃ.ಪ. ಸಹಕಾರಿ ನಿ., ಮಲ್ಲಸಮುದ್ರ ಇವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆ, ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘದ ಸಹಾಯಕ ನಿಬಂಧಕರಾದ ಶ್ರೀಮತಿ ಪುಷ್ಪಾ ಕಡಿವಾಳ, ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿಗಳಾದ ಬಸವರಾಜ ನಿಡಗುಂದಿ, ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀಮತಿ ಗಂಗಮ್ಮ ನಾಯ್ಕರ, ಗದಗ ತಾಲೂಕಿನ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಕರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು, ಸದಸ್ಯರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಿದ್ದು ಯಾದವಪುರಿ ಇವರು ಭಾಗವಹಿಸಿ ಸಹಕಾರಿಯ ಕಾಯ್ದೆ ತಿದ್ದುಪಡೆಯ ಕುರಿತು ಉಪನ್ಯಾಸ ನೀಡಿದರು. ನಂತರದಲ್ಲಿ ಸಸಿ ನೆಡುವ ಕಾರ್ಯಕ್ರಮ ಜರುಗಿತು.



**ಹಾವೇರಿ** : ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘ ನಿ, ಹಾನಗಲ್ಲ ಇದರ ಆವರಣದಲ್ಲಿ ಭಾರತ ಸರ್ಕಾರದ ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸಸಿ ನೆಡುವ ಮೂಲಕ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಶ್ರೀ ಕೆ. ಶಿವಲಿಂಗಪ್ಪ ಮತ್ತು ಜನತಾ ಸಹಕಾರಿಯ ಆಡಳಿತ ಮಂಡಳಿ ಮತ್ತು ಹಾನಗಲ್ ತಾಲೂಕಿನ ಕೆಲವು ಸಹಕಾರಿಗಳ ಮುಖ್ಯಕಾರ್ಯನಿರ್ವಕರು ಉಪಸ್ಥಿತರಿದ್ದರು.



**ತುಮಕೂರು :** ಕೇಂದ್ರದಲ್ಲಿ ಸಹಕಾರ ಸಚಿವಾಲಯವು ರಚನೆಯಾಗಿ 5 ವರ್ಷಗಳು ಪೂರ್ಣವಾಗುತ್ತಿರುವುದರ ಪ್ರಯುಕ್ತ ಸಹಕಾರದಿಂದ ಸಮೃದ್ಧಿ ಎಂಬ ಧ್ಯೇಯವಾಕ್ಯದೊಂದಿಗೆ ದೇಶದಾದ್ಯಂತ ಹಾಗೂ ರಾಜ್ಯದಾದ್ಯಂತ ಸಹಕಾರ ಸಪ್ತಾಹವನ್ನು (Co-operative Week) ಅನ್ನು ಆಚರಿಸಲಾಗುತ್ತಿದೆ. ಇದರ ಭಾಗವಾಗಿ ದಿನಾಂಕ 30–06–2026 ರಂದು ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ., ಎಸ್.ಎಸ್ ಪುರಂ ಶಾಖೆ, ತುಮಕೂರು ಇಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರ ಕ್ಷೇತ್ರದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ ವಿಜಯ್ ರವರು, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ಶ್ರೀ ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ಟಿ.ಎಲ್ ರವರು ಹಾಗೂ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನಯ್ಯ ರವರು ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು. ಈ ಶಿಬಿರದಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಸೇರಿ ಒಟ್ಟು 64 ಜನ ಭಾಗವಹಿಸಿದ್ದರು.



**ಉತ್ತರ ಕನ್ನಡ :** ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರ್ಣೈಸುತ್ತಿರುವ ಸಂದರ್ಭದಲ್ಲಿ ಸಹಕಾರ ಸಪ್ತಾಹ ಆಚರಣೆಯನ್ನು ದಿನಾಂಕ 29.06.2026 ರಂದು ಉತ್ತರ ಕನ್ನಡ ಜಿಲ್ಲೆಯ ಕುಮಟಾ ಉಪವಿಭಾಗದ ವತಿಯಿಂದ ಸಹಕಾರ ಇಲಾಖೆ, ಸಹಕಾರ ಮಹಾಮಂಡಳ, ಸೌಹಾರ್ದ ಸಹಕಾರಿಗಳು ಹಾಗೂ ರೋಟರಿ ಕ್ಲಬ್ ಸಹಯೋಗದೊಂದಿಗೆ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷಕುಮಾರ.ಎಮ್.ಜೆ, ತಾಲೂಕಿನ ಸ್ಥಳೀಯ ಸಹಕಾರಿಗಳು, ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಬೆಳಗಾವಿ:** ದಿನಾಂಕ 29.06.2026 ರಂದು ಮನಮಂದಿರ ಸೌಹಾರ್ದ ಸಹಕಾರಿ ನಿಯಮಿತ ಖಾನಾಪುರ ಸಹಕಾರಿ ಕಚೇರಿ ಆವರಣದಲ್ಲಿ ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರ್ಣೈಸುತ್ತಿರುವ ಸಂದರ್ಭದಲ್ಲಿ ಸಹಕಾರ ಸಪ್ತಾಹ ಆಚರಣೆಯನ್ನು ಸಹಕಾರ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು. ಪ್ರಾಂತೀಯ ಕಚೇರಿ ಬೆಳಗಾವಿ ಹಾಗೂ ಖಾನಾಪುರ ತಾಲೂಕಿನ ಸ್ಥಳೀಯ ಸೌಹಾರ್ದ ಸಹಕಾ–ರಿಗಳಿಂದ ಸಹಯೋಗದಲ್ಲಿ ಆಯೋಜಿಸಿರುವ ಸಸಿ ನೆಡುವ ಕಾರ್ಯಕ್ರಮ ಜರುಗಿತು. ಸದರಿ ಕಾರ್ಯಕ್ರಮದಲ್ಲಿ ಖಾನಾಪುರ ತಾಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಶಶಿಕಲಾ ಪಾಟೀಲ್, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠಾ ಹಾಗೂ ಖಾನಾಪುರ ತಾಲೂಕಿನ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಬೆಳಗಾವಿ:** ಕೇಂದ್ರ ಸಹಕಾರ ಸಚಿವಾಲಯ 5 ವರ್ಷ ಪೂರ್ಣೈಸುತ್ತಿರುವ ಸಂದರ್ಭದಲ್ಲಿ ಸಹಕಾರ ಸಪ್ತಾಹ ಆಚರಣೆಯನ್ನು ದಿನಾಂಕ 29.06.2026 ರಂದು ಶ್ರೀ ಚೌರಾಶಿದೇವಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಖಾನಾಪುರ.ಜಿ: ಬೆಳಗಾವಿ, ಸಹಕಾರಿ ಸಂಘದ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂಧರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠ ಸಂಘದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.



# 104ನೇ ಅಂತರರಾಷ್ಟ್ರೀಯ ಸಹಕಾರ ದಿನ

**ಧ್ಯೇಯ : "ಶಾಂತಿಯುತ ಜಗತ್ತಿಗೆ ಸಹಕಾರ ಸಂಸ್ಥೆಗಳು"**

104ನೇ ಅಂತರರಾಷ್ಟ್ರೀಯ ಸಹಕಾರ ದಿನವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು :** 104ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿಯ ಹಾಗೂ ದಾವಾ ಪಂಚಾಯಿತಿ ನ್ಯಾಯಾಲಯದ ಸಿಬ್ಬಂದಿಯವರು ಉಪಸ್ಥಿತರಿದ್ದರು.




**ಮೈಸೂರು :** 104ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಶಿಕ್ಷಣನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಹೆಚ್. ವಿ ರಾಜೀವ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲೆಯ ಸ್ಥಳೀಯ ಸಹಕಾರಿಗಳು ಹಾಗೂ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ :** 104ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಹಕಾರಿಗಳು ಹಾಗೂ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೆಳಗಾವಿ :** 104ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ವಜಾರೋಹಣವನ್ನು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ನೆರವೇರಿಸಿದರು. ಈ ಸಂದರ್ಭದಲ್ಲಿ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು

# ಇ-ಸ್ಟಾಂಪಿಂಗ್ ವಿಭಾಗದಿಂದ ಮಾಹಿತಿ - ಆರ್ಟಿಕಲ್-4 ಅಫಿಡವಿಟ್ ಕುರಿತಂತೆ

ರಾಜ್ಯದ ಇ–ಸ್ಟಾಂಪಿಂಗ್ ಹೊಂದಿರುವ ಎಲ್ಲ ಸೌಹಾರ್ದ ಸಹಕಾರಿಗಳ ಗಮನಕ್ಕೆ ಈ ಮೂಲಕ ತಿಳಿಸುವುದೇನೆಂದರೆ, ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ಸ್ಟಾಂಪು (ತಿದ್ದುಪಡಿ)2023ರ ಅಧಿಸೂಚನೆಯನ್ನು ಹೊರಡಿಸಿ, ದಿನಾಂಕ:03.02.2024 ರಿಂದ ಆಟೋ ಕ್ಯಾಲ್ಕುಲೇಟನ್ನು ಜಾರಿ ಮಾಡಿರುವುದು ತಮಗೆ ತಿಳಿದ ವಿಷಯವಾಗಿರುತ್ತದೆ ಮತ್ತು ಅದರಂತೆ ಸಾರ್ವಜನಿಕರಿಗೆ ಸ್ಟಾಂಪ್ ಪೇಪರ್‌ನ್ನು ವಿತರಿಸುತ್ತಾ, ಸರ್ಕಾರದ ಖಜಾನೆಗೆ ಸೌಹಾರ್ದ ಸಹಕಾರಿಗಳ ಎಸಿಸಿಗಳಿಂದಲೇ ಸುಮಾರು ಶೇ.30%ರಷ್ಟು ಮೊತ್ತ ಪಾವತಿಯಾಗುತ್ತಿದ್ದು ಸಂತಸದ ವಿಷಯವಾಗಿದೆ.

ಕೆಲವು ಸಹಕಾರಿಗಳು ಅನುಚ್ಛೇಧ–4ರಲ್ಲಿ ರೂ.100/–ರ ಅಫಿಡವಿಟ್‌ನ್ನು ನೀಡದೆ, ಬೇರೆ ಬೇರೆ ಅನುಚ್ಛೇದ(Article)ಗಳಲ್ಲಿ ಕಡಿಮೆ ಮೊತ್ತವನ್ನು ನಮೂದಿಸಿ ಅಫಿಡವಿಟ್‌ನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಮುಂದಿನ ದಿನಗಳಲ್ಲಿ ತಾವುಗಳು 03.02.2024 ರಿಂದ ಇಲ್ಲಿಯವರೆಗೆ ನೀಡಿದ ಸ್ಟಾಂಪ್ ಪೇಪರ್‌ನ ವ್ಯತ್ಯಾಸದ ಮೊತ್ತವನ್ನು ಸರ್ಕಾರವು ತಮ್ಮ ಎಸಿಸಿ ಕೇಂದ್ರಗಳಿಂದ ವಸೂಲಿ ಮಾಡಲು ಮುಂದಾಗಬಹುದು ಎಂಬುದನ್ನು ತಮ್ಮ ಗಮನಕ್ಕೆ ತರಲುಬಯಸುತ್ತಿದ್ದೇವೆ ಹಾಗೂ ಇಂದಿನಿಂದಲೇ ಎಚ್ಚೆತ್ತುಕೊಂಡು ಅನುಚ್ಛೇಧ–4ರಲ್ಲಿ ಮಾತ್ರ ಅಫಿಡವಿಟ್‌ನ್ನು ನೀಡಲು ಈ ಮೂಲಕ ತಿಳಿಸಲಾಗಿದೆ.

ಅನುಚ್ಛೇದ–4ರಲ್ಲಿ ಮಾತ್ರ ಅಫಿಡವಿಟ್‌ನ್ನು ನೀಡಲು ಈ ಹಿಂದೆಯೇ ಇ–ಮೇಲ್ ಕಳುಹಿಸುವ ಮೂಲಕ ತಮ್ಮ ಗಮನಕ್ಕೆ ತರಲಾಗಿರುತ್ತದೆ ಮತ್ತು ಸ್ಟಾಕ್ ಹೋಲ್ಡಿಂಗ್‌ನಿಂದ ಇದರ ಕುರಿತು ಬಂದಿರುವ ಪತ್ರವನ್ನು ಸಹ ಕಳುಹಿಸಲಾಗಿದೆ.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ತುಮಕೂರು :** ದಿನಾಂಕ 02.06.2026ರಂದು ತುಮಕೂರು ಜಿಲ್ಲೆಯಲ್ಲಿ ನಷ್ಟ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ನಿ., ಎಸ್ಎಸ್ ಪುರಂ ಶಾಖೆ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಲ್. ಸುರೇಶ್ ರಾವ್ ರವರು ಭಾಗವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ರವರು ನಡೆಸಿಕೊಟ್ಟರು. ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹಾಗೂ ಹಣಕಾಸು ನಿರ್ವಹಣೆ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ ರವೀಂದ್ರನಾಥ್ ರವರು ಮಾಹಿತಿ ನೀಡಿದರು. ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಗಳು ಹಾಗೂ ಆಡಳಿತ ಮಂಡಳಿ ಪ್ರಕಾರ್ಯಗಳು ವಿಷಯದ ಕುರಿತು ಸಹಕಾರಿ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ರವರು ಮಾಹಿತಿ ನೀಡಿದರು. 43 ಸೌಹಾರ್ದ ಸಹಕಾರಿಗಳಿಂದ 64 ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 03.06.2026ರಂದು ದಾವಣಗೆರೆ ಜಿಲ್ಲೆಯಲ್ಲಿ ನಷ್ಟ ಹೊಂದಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಉಮೇಶ್ ಶೆಟ್ಟಿ ರವರು, ಸಹಕಾರ ಸಂಘಗಳ ನಿವೃತ್ತ ಸಹಾಯಕ ನಿಬಂಧಕರಾದ ಶ್ರೀ ಮಹಾರುದ್ರಪ್ಪ ರವರು ಭಾಗವಹಿಸಿದ್ದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ನಡೆಸಿಕೊಟ್ಟರು. ಸಹಕಾರಿಗಳು ಲಾಭಗಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಶ್ರೀ ಉಮೇಶ್ ಶೆಟ್ಟಿ ರವರು ಮಾಹಿತಿ ನೀಡಿದರು. ವ್ಯವಹಾರ ಅಭಿವೃದ್ಧಿ ಕಾರ್ಯಗಳು ಮತ್ತು ಸಾಲ ವಿತರಣೆ ಹಾಗೂ ವಸೂಲಾತಿ ಕ್ರಮಗಳ ಕುರಿತು ಶ್ರೀ ಮಹಾರುದ್ರಪ್ಪ ರವರು ಮಾಹಿತಿ ನೀಡಿದರು. 09 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.



**ಶಿವಮೊಗ್ಗ :** ದಿನಾಂಕ 03.06.2026ರಂದು ಶಿವಮೊಗ್ಗ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಹಾಗೂ ಸನ್ 2024–25 & 2025–26ನೇ ಸಾಲಿನಲ್ಲಿ ಹೊಸದಾಗಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಜ್ಯೂಯಲ್ ರಾಕ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಉದ್ಘಾಟನೆಯನ್ನು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ನಾರಾಯಣ ಮೂರ್ತಿ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಮಾಲತಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ರಘುನಂದನ್ ಕೆ. ಇವರು ಭಾಗವಹಿಸಿದ್ದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್ ರವರು ನಡೆಸಿಕೊಟ್ಟರು. 32 ಸೌಹಾರ್ದ ಸಹಕಾರಿಗಳಿಂದ 76 ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಿಕ್ಕಬಳ್ಳಾಪುರ** : ದಿನಾಂಕ 16.06.2026ರಂದು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ಶಿವಕುಮಾರ್ ರವರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ರವರು, ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಹೆಚ್.ಎಸ್. ನಾಗರಾಜಯ್ಯ ರವರು ಉಪಸ್ಥಿತರಿದ್ದರು. "ಪತ್ತೇತರ ಚಟುವಟಿಕೆಗಳ ಮೂಲಕ ಸಹಕಾರಿಗಳು ಲಾಭಗಳಿಸುವ ಕು–ರಿತು" ವಿಷಯದ ಕುರಿತು ಶ್ರೀ ಹೆಚ್.ಎಸ್. ನಾಗರಾಜಯ್ಯ ರವರು ಮಾಹಿತಿ ನೀಡಿದರು. "ನಿಧಿಗಳ ಪರಿಣಾಮಕಾರಿ ಬಳಕೆ" ವಿಷಯದ ಕುರಿತು ಶ್ರೀ ವೇಣು ಡಿ.ವಿ, ಮಾನ್ಯ ಉಪ ನಿರ್ದೇಶಕರು, ಲೆಕ್ಕಪ–ರಿಶೋಧನಾ ಇಲಾಖೆ, ಚಿಕ್ಕಬಳ್ಳಾಪುರ ಇವರು ಮಾಹಿತಿ ನೀಡಿದರು. 46 ಸೌಹಾರ್ದ ಸಹಕಾರಿಗಳಿಂದ 54 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಬೆಳಗಾವಿ** : ದಿನಾಂಕ 02.06.2026 ರಂದು ಬೆಳಗಾವಿ ಜಿಲ್ಲೆಯ ಅಥಣಿ, ರಾಯಬಾಗ ಮತ್ತು ಮೂಡಲಗಿ, ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಬೆಳಿಗ್ಗೆ 10.30 ಗಂಟೆಗೆ ದಿ ಜಾಗೃತಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಹಾರೂಗೇರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೆರವೇರಿಸಿದರು.

ತರಬೇತಿ ಮೊದಲನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಹಾಂತೇಶ ಹೋಸಪೇಠ, ಸನ್ನದು ಲೆಕ್ಕಪರಿಶೋಧಕರು, ಬೆಳಗಾವಿ ಇವರು ಲೆಕ್ಕ ಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು ಮತ್ತು ಎರಡನೆಯ ಅವಧಿಯಲ್ಲಿ ಶ್ರೀ ರಾಚಯ್ಯ ಹಿರೇಮಠ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಇವರು ದಾವಾ ದಾಖಲಾತಿ ಮತ್ತು ಸಹಕಾರಿಗಳ ವರ್ಷಾಂತ್ಯದ ಮಾಹಿತಿ ಸಲ್ಲಿಕೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 103 ಸಹಕಾರಿಗಳಿಂದ 118 ಜನ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದರು.

---



**ಬೆಳಗಾವಿ** : ದಿನಾಂಕ 03.06.2026 ರಂದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ನಿಪ್ಪಾಣಿ ಮತ್ತು ಕಾಗವಾಡ ತಾಲೂಕಿನ ಸೌಹಾರ್ದ ಸಹಕಾ–ರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಬೆಳಿಗ್ಗೆ 10.30 ಗಂಟೆಗೆ ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಸಭಾ ಭವನ, ಬಸವ ಸರ್ಕಲ್, ಚಿಕ್ಕೋಡಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೆರವೇರಿಸಿದರು.

ತರಬೇತಿ ಮೊದಲನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಹಾಂತೇಶ ಹೋಸಪೇಠ, ಸನ್ನದು ಲೆಕ್ಕಪರಿಶೋಧಕರು, ಬೆಳಗಾವಿ ಇವರು ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಉಪನ್ಯಾಸ ನೀಡಿದರು ಮತ್ತು ಎರಡನೆಯ ಅವಧಿಯಲ್ಲಿ ಶ್ರೀ ಗಂಗಾರಾಮ ಕೊಳಾಪ್ಪೆ, ಅಧಿಕಾರಿಗಳು, ಬೆಳಗಾವಿ ಇವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 107 ಸಹಕಾರಿಗಳಿಂದ 122 ಜನ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದರು.



**ವಿಜಯಪುರ:** ದಿನಾಂಕ 05.06.2026 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಬೆಳಿಗ್ಗೆ 10.30 ಗಂಟೆಗೆ ಶ್ರೀ ಶಾಂತೇಶ್ವರ ವಿವಿಧ ಉದ್ಧೇಶಗಳ ಸಹಕಾರ ಸಂಘ ನಿ., ವಿಜಯಪುರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜಯ ಬ ಪಾಟೀಲ್ ಇವರು ನೆರವೇರಿಸಿದರು.

ತರಬೇತಿ ಮೊದಲನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಹಾಂತೇಶ ಹೋಸಪೇಠ, ಸನ್ನದು ಲೆಕ್ಕಪರಿಶೊಧಕರು, ಬೆಳಗಾವಿ ಇವರು ಲೆಕ್ಕ ಪತ್ರಗಳ ಅಂತಿಮಗೊಳಿಸುವಿಕೆ ಕುರಿತು ಉಪನ್ಯಾಸ ನೀಡಿದರು ಮತ್ತು ಎರಡನೆಯ ಅವಧಿಯಲ್ಲಿ ಶ್ರೀ ರಾಚಯ್ಯ ಹಿರೇಮಠ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಇವರು ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ.ಎಸ್ ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 166 ಸಹಕಾರಿಗಳಿಂದ 191 ಜನ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದರು.



**ಕೊಪ್ಪಳ :** ದಿನಾಂಕ:30.05.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿಯ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ ಹಾಗೂ ಕನಕಗಿರಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಲಲಿತ ಮಹಲ್ ಆನೆಗುಂದಿ ರಸ್ತೆ, ಗಂಗಾವತಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಮಹಾಲಿಂಗಪ್ಪಾ ಧೊಟಿಹಾಳ ಒಕ್ಕೂಟದ ನಿರ್ದೇಶಕರಾದ ಶ್ರೀ ನಾಗಲಿಂಗಪ್ಪ ಫತ್ತಾರ, ಶ್ರೀ ಕುಮಾರೆಪ್ಪ ಸಿಂಗನಾಳ, ಶ್ರೀ ಶರಣಬಸವ ಚನ್ನಳ್ಳಿ ಶ್ರೀ ಲೋಕೆಶಪ್ಪ ರವರು ಉಪಸ್ಥಿತರಿದ್ದರು. ಆಡಳಿತ ಮಂಡಳಿಯ ಸಭೆಯ ನಡುವಳಿ ಹಾಗೂ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ದೇಶಕರ ಪಾತ್ರದ ಕುರಿತು ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ರಘುನಂದನ್ ರವರು ಉಪನ್ಯಾಸ ನೀಡಿದರು. ಲೆಕ್ಕಪರಿಶೋಧನಾ ವರದಿಯ ಪೂರ್ವ ಸಿದ್ದತೆಯ ಕುರಿತು ಶ್ರೀ ಸುನೀಲ ಪತ್ತಾರ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ರವರು ಉಪನ್ಯಾಸ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ 118 ಸೌಹಾರ್ದ ಸಹಕಾರಿಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದರು.



**ಬಳ್ಳಾರಿ :** ದಿನಾಂಕ 03.06.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತಿಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ 2024-25 ಹಾಗೂ 2025-26ನೇ ಸಾಲಿನಲ್ಲಿ ಸೌಹಾರ್ದ ಕಾಯ್ದೆ ಅಡಿಯಲ್ಲಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗೆ/ಉಪಾಧ್ಯಕ್ಷರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಪ್ರವೇಶ ತರಬೇತಿ"ಯನ್ನು ಬಳ್ಳಾರಿ ಬ್ಯುಸಿನೆಸ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಸತ್ಯನಾರಾಯಣ, ಮಾನ್ಯ ಅಧ್ಯಕ್ಷರು, ಮೇಘ ಸೌಹಾರ್ದ ಸಹಕಾರಿ ನಿ., ಬಳ್ಳಾರಿ ಇವರು ಉದ್ಘಾಟಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತಯ್ಯರವರು ವಹಿಸಿದ್ದರು. ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಯರಿಸ್ವಾಮಿ ಹಾಗೂ ಕಲಬುರಗಿ ಪ್ರಾಂತಿಯ ಅಧಿಕಾರಿಯವರಾದ ಶ್ರೀ ಸಂಜಯ ಕೋರಟಕರ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಮೊದಲನೇ ಅವಧಿಯಲ್ಲಿ ಸನ್ನದು ಲೆಕ್ಕ ಲೆಕ್ಕಪರಿಶೋಧಕರಾದ ಶ್ರೀ ಯರಿಸ್ವಾಮಿ ಇವರು ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಕುರಿತು ಮಾಹಿತಿ ನೀಡಿದರು. ಮಧ್ಯಾಹ್ನ ಅವಧಿಯಲ್ಲಿ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ಇವರು ಆಡಳಿತ ಮಂಡಲಿಯ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವೀರಶೆಟ್ಟಿ ಇವರು ಮುಖ್ಯ ಕಾರ್ಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ ಬಳ್ಳಾರಿ ಜಿಲ್ಲೆಯ 20 ಸೌಹಾರ್ದ ಸಹಕಾರಿಗಳಿಂದ 60 ಜನ ಪ್ರತಿನಿಧಿಗಳು ಭಾಗವಹಿಸಿದರು.




**ರಾಯಚೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ "ಪರಿಷ್ಕೃತ ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಹಾಗೂ ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ" ಕುರಿತ ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ದಿನಾಂಕ.09.06.2026ರಂದು ಮಾನವಿಯ ಶ್ರೀ ವಿರೂಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ. ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಎಂ. ದೊಡ್ಡ ಬಸವರಾಜ್, ಮಾನ್ಯ ಅಧ್ಯಕ್ಷರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಜಿ. ರಾಮಾಂಜನೇಯ ಶೆಟ್ಟಿ, ಮಾನ್ಯ ಉಪಾಧ್ಯಕ್ಷರು, ಮಾನವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಮಾನವಿ, ಶ್ರೀ ಅಮರೇಗೌಡ ನಕ್ಕುಂದಿ, ಮಾನ್ಯ ಉಪಾಧ್ಯಕ್ಷರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು ಹಾಗೂ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಭಾಗವಹಿಸಿದ್ದರು. ತರಬೇತಿ ಅವಧಿಯಲ್ಲಿ "ಪರಿಷ್ಕೃತ ಸಂಯುಕ್ತ ಸಹಕಾರಿಯ ಸುತ್ತೋಲೆಗಳು" ಎಂಬ ವಿಷಯದ ಬಗ್ಗೆ ಶ್ರೀ ಸಂಜಯ ಕೋರಟಕರ, ಪ್ರಾಂತೀಯ ಅಧಿಕಾರಿಗಳು, ಕಲಬುರಗಿ ಪ್ರಾಂತ ಇವರು ಮಾಹಿತಿ ನೀಡಿದರು. ಹಾಗೂ "ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ ಹಾಗೂ ವಾರ್ಷಿಕ ಸಾಮಾನ್ಯ ಸಭೆ " ಕುರಿತು, ಶ್ರೀ ನಟರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಮಾಹಿತಿ ನೀಡಿದರು. ಮಾನವಿ, ಸಿರವಾರ, ದೇವದುರ್ಗ ಹಾಗೂ ರಾಯಚೂರು ತಾಲ್ಲೂಕಿನ 76 ಸೌಹಾರ್ದ ಸಹಕಾರಿಗಳಿಂದ 80 ಜನ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.



**ರಾಯಚೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಚೇರಿ ಕಲಬುರಗಿ ವತಿಯಿಂದ "ಪರಿಷ್ಕೃತ ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಹಾಗೂ ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ" ಕುರಿತು. ದಿನಾಂಕ.10.06.2026ರಂದು ಬೆಳಗ್ಗೆ 10 ಗಂಟೆಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವು ಲಿಂಗಸೂಗೂರು ನಗರದ ರಡ್ಡೆರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಎಂ. ದೊಡ್ಡ ಬಸವರಾಜ್, ಮಾನ್ಯ ಅಧ್ಯಕ್ಷರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕುಮಾರೆಪ್ಪ, ಮಾನ್ಯ ನಿರ್ದೇಶಕರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು ಹಾಗೂ ಅಧ್ಯಕ್ಷರು ರಡ್ಡೆರ ಪತ್ತಿನ ಸೌ.ಸ.ಸ.ನಿ., ಇವರು ಭಾಗವಹಿಸಿದ್ದರು. ಕಲಬುರ್ಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಕಾರ್ಯಕ್ರಮದ ಕುರಿತು ಪ್ರಾಸ್ತವಿಕ ನುಡಿಗಳನ್ನಾಡಿದರು. ತರಬೇತಿ ಅವಧಿಯಲ್ಲಿ "ಪರಿಷ್ಕೃತ ಸಂಯುಕ್ತ ಸಹಕಾರಿಯ ಸುತ್ತೋಲೆಗಳು" ಎಂಬ ವಿಷಯದ ಬಗ್ಗೆ ಶ್ರೀ ಸಂಜಯ ಕೋರಟಕರ, ಪ್ರಾಂತೀಯ ಅಧಿಕಾರಿಗಳು, ಕಲಬುರಗಿ ಪ್ರಾಂತ ಇವರು ಮಾಹಿತಿ ನೀಡಿದರು ಹಾಗೂ "ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ ಹಾಗೂ ವಾರ್ಷಿಕ ಸಾಮಾನ್ಯ ಸಭೆ " ಕುರಿತು, ಶ್ರೀ ನಟರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಮಾಹಿತಿ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ನಟರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸಿದರು, ಹುಸೇನ್ ಬಾಷಾ, ಪ್ರಭಾರಿ ಮುಖ್ಯಕಾರ್ಯನಿರ್ವಾಹಕರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟ ನಿ., ಇವರು ವಂದಿಸಿದರು. ಮಸ್ಕಿ ಹಾಗೂ ಲಿಂಗಸೂಗೂರು ತಾಲ್ಲೂಕಿನ 63 ಸೌಹಾರ್ದ ಸಹಕಾರಿಗಳಿಂದ 68 ಜನ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.




**ರಾಯಚೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಚೇರಿ ಕಲಬುರಗಿ ವತಿಯಿಂದ "ಪರಿಷ್ಕೃತ ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಹಾಗೂ ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ" ಕುರಿತು ದಿನಾಂಕ.10.06.2026ರಂದು ಮಧ್ಯಾಹ್ನ 3.30 ಗಂಟೆಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮವು ಸಿಂಧನೂರು ನಗರದ ತುಂಗಭದ್ರಾ ಸೌಹಾರ್ದ ಸಹಕಾರಿ ಸಂಘ ನಿ., ದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಶ್ರೀ ಎಂ. ದೊಡ್ಡ ಬಸವರಾಜ್, ಮಾನ್ಯ ಅಧ್ಯಕ್ಷರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ

ನಿ., ರಾಯಚೂರು ಇವರು ಉದ್ಘಾಟಿಸಿದರು. ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಕಾರ್ಯಕ್ರಮದ ಕುರಿತು ಪ್ರಾಸ್ತವಿಕ ನುಡಿಗಳನ್ನಾಡಿದರು. ತರಬೇತಿ ಅವಧಿಯಲ್ಲಿ "ಪರಿಷ್ಕೃತ ಸಂಯುಕ್ತ ಸಹಕಾರಿಯ ಸುತ್ತೋಲೆಗಳು" ಎಂಬ ವಿಷಯದ ಬಗ್ಗೆ ಶ್ರೀ ಸಂಜಯ ಕೋರಟಕರ, ಪ್ರಾಂತೀಯ ಅಧಿಕಾರಿಗಳು, ಕಲಬುರಗಿ ಪ್ರಾಂತ ಇವರು ಮಾಹಿತಿ ನೀಡಿದರು ಹಾಗೂ "ಲೆಕ್ಕಪರಿಶೋಧನ ವರದಿ ಪೂರ್ವ ಸಿದ್ಧತೆ ಹಾಗೂ ವಾರ್ಷಿಕ ಸಾಮಾನ್ಯ ಸಭೆ" ಕುರಿತು, ಶ್ರೀ ನಟರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಮಾಹಿತಿ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ನಟರಾಜ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ನಿರ್ವಹಿಸಿದರು, ಹುಸೇನ್ ಬಾಷಾ, ಪ್ರಭಾರಿ ಮುಖ್ಯ ಕಾರ್ಯನಿರ್ವಾಹಕರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರು ವಂದಿಸಿದರು. ಸಿಂಧನೂರು ತಾಲ್ಲೂಕಿನ 69 ಸೌಹಾರ್ದ ಸಹಕಾರಿಗಳಿಂದ 70 ಜನ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.



**ಕಲಬುರಗಿ :** ದಿನಾಂಕ. 19.06.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗಾಗಿ ಹಾಗೂ ಮುಖ್ಯಕಾರ್ಯನಿರ್ವಾಹಕ–ರಿಗೆ ವಿಷಯಾಧಾರಿತ ತರಬೇತಿಯನ್ನು ಕಲಬುರಗಿ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣ, ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ ಧರಿಯಾಪುರ–ಕೊಟನೂರು, ಜಿ.ಡಿ.ಎ ಬಡಾವಣೆ, ಕಲಬುರಗಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ವಹಿಸಿದರು. ಕಾರ್ಯಕ್ರಮ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ನಡೆಸಿಕೊಟ್ಟರು. ಮೊದಲನೇ ಅವಧಿಯನ್ನು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಸಂಜಯ ಕೋರಟಕರ ಇವರು ನಿರ್ದೇಶಕರ ಹಕ್ಕು ಮತ್ತು ಕರ್ತವ್ಯಗಳ ಕುರಿತು ಉಪನ್ಯಾಸ ನೀಡಿದರು. ಎರಡನೇ ಅವಧಿಯನ್ನು ಶ್ರೀ ಶರಣಬಸವ ಮಾಡೋಳೆ ಮಾನ್ಯ ಉಪ ನಿರ್ದೇಶಕರು (ಪ್ರಭಾರ) ಲೆಕ್ಕಪರಿಶೋಧನಾ ಇಲಾಖೆ ಯಾದಗಿರಿ ಇವರು ಲೆಕ್ಕ ಪರಿಶೋಧನಾ ವರದಿಯ ಸಿದ್ಧತೆ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಕಲಬುರಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಶಿವಕಾಂತ ಎನ್ ಇವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಮಹಾಂತಪ್ಪ ಎಸ್ ಕಾನೂನು ಅಧಿಕಾರಿ ಕಲಬುರಗಿ ವಿಭಾಗ ಇವರು ನಡೆಸಿಕೊಟ್ಟರು. ಈ ವಿಷಯಾಧಾ–ರಿತ ತರಬೇತಿಯಲ್ಲಿ 64 ಸೌಹಾರ್ದ ಸಹಕಾರಿಗಳಿಂದ 88 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.



**ಯಾದಗಿರಿ :** ದಿನಾಂಕ.20.06.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿಯ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಸದಸ್ಯರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕ–ರಿಗಾಗಿ "ವಿಷಯಾಧಾರಿತ ತರಬೇತಿ"ಯನ್ನು ಹೋಟೆಲ್ ಮಾತೋಶ್ರೀ ಫ್ಯಾಮಿಲಿ ರೆಸ್ಟೋರೆಂಟ್, ಶಹಾಪುರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ಹಾಗೂ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್ ರವರು ನೆರವೇರಿಸಿದರು. ಮೊದಲನೇ ಅವಧಿಯನ್ನು ಯಾದಗಿರಿ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನ ಇಲಾಖೆಯ ಮಾನ್ಯ ಉಪನಿರ್ದೇಶಕರು (ಪ್ರಭಾರ) ಇವರು ಶ್ರೀ ಶರಣಬಸವ ಮಾಡೋಳೆ ರವರು "ಲೆಕ್ಕಪರಿಶೋಧನಾ ವರದಿಯ ಸಿದ್ಧತೆ ಕುರಿತು" ಉಪನ್ಯಾಸವನ್ನು ನೀಡಿದರು. ಎರಡನೇ ಅವಧಿಯಲ್ಲಿ "ಸಾಲಾ ವಸೂಲಾತಿ ಮತ್ತು ದಾವಾ ದಾಖಲಾತಿಯ" ಕುರಿತು ಕಲಬುರಗಿ ಪ್ರಾಂತದ ಕಾನೂನು ಮತ್ತು ಟಾಸ್ಕ್ ಫೋರ್ಸ್ ವಿಭಾಗದ ಮಾನ್ಯ ಅಧಿಕಾರಿಯಾದ ಶ್ರೀ ಮಹಾಂತಪ್ಪ ರವರು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಯಾದಗಿರಿ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಪವನ ಎಮ್ ಆರ್ ಇವರು ನಡೆಸಿಕೊಟ್ಟರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಅಧಿಕಾರಿಯಾದ ಶ್ರೀ ಮಹಾಂತಪ್ಪ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 46 ಸೌಹಾರ್ದ ಸಹಕಾ–ರಿಗಳ ಪ್ರತಿನಿಧಿಗಳು ಭಾಗವಹಿಸಿದರು.




**ವಿಜಯನಗರ :** ದಿನಾಂಕ 20.06.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಕಲಬುರಗಿಯಿಂದ, ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಪ್ರಿಯದರ್ಶಿನಿ ಸ್ಟೇಷನ್ ರಸ್ತೆ, ಹೊಸಪೇಟೆ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಮಾನ್ಯ ಉಪನಿಬಂಧಕರಾದ ಶ್ರೀ ವೀರಭದ್ರಯ್ಯ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರ್, ಬಳ್ಳಾರಿ ಜನತಾ ಬಜಾರ್ ಅಧ್ಯಕ್ಷರಾದ ಶ್ರೀಮತಿ ಪಲ್ಲೆದ್ ಮೈತ್ರಿ ಹಾಗೂ ವಿಕಾಸ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಚ ಹಿರೇಮಠ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಯರಿಸ್ವಾಮಿ, ಉಪಸ್ಥಿತರಿದ್ದರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಕಲಬುರಗಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ನುಡಿದರು. ವಿಜಯನಗರ ಮತ್ತು ಬಳ್ಳಾರಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ ನಿರೂಪಿಸಿದರು. ಮೊದಲನೇ ಅವಧಿಯಲ್ಲಿ ಮಾನ್ಯ ಅಧ್ಯಕ್ಷರು ಸಹಕಾರಿಗಳೊಂದಿಗೆ ಸಂಪರ್ಕ ಸಭೆ ನಡೆಸಿ ಸಹಕಾರಿಗಳ ಪ್ರಶ್ನೆಗಳಿಗೆ ಸಲಹೆ ಮಾರ್ಗದರ್ಶನ ಮಾಡಿದರು. ಎರಡನೇ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಯರಿಸ್ವಾಮಿ ಇವರು ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಕುರಿತು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 100 ಸೌಹಾರ್ದ ಸಹಕರಿಗಳಿಂದ 145 ಪ್ರತಿನಿಧಿಗಳು ಭಾಗವಹಿಸಿದರು.

## ವ್ಯವಹಾರ ಅಭಿವೃದ್ಧಿ ತರಬೇತಿ



**ಹಾವೇರಿ :** ದಿನಾಂಕ 19.06.2026 ರಂದು ಹಾವೇರಿ ಜಿಲ್ಲೆಯ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಅಶೋಕ ಹೋಟೆಲ, ಹುಬ್ಬಳ್ಳಿ ರಸ್ತೆ, ಹಾವೇರಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಇವರು ನೆರವೇರಿಸಿದರು.

ತರಬೇತಿ ಮೊದಲನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಂಜಯ ಸುಣಗಾರ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸವಣೂರು ಇವರು ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಉಪನ್ಯಾಸ ನೀಡಿದರು ಮತ್ತು ಎರಡನೆಯ ಅವಧಿಯಲ್ಲಿ ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಇವರು ಸಹಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರವೀಣ ಬಾರ್ಕಿ ಇವರು ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 31 ಸೌಹಾರ್ದ ಸಹಕಾರಿಗಳಿಂದ 36 ಜನ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದರು.



**ಬೆಳಗಾವಿ :** ದಿನಾಂಕ 24.06.2026 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಬೈಲಹೊಂಗಲ, ಚನ್ನಮ್ಮನ ಕಿತ್ತೂರ, ಗೋಕಾಕ, ಸವದತ್ತಿ, ರಾಮದುರ್ಗ ಹಾಗೂ ಯರಗಟ್ಟಿ ತಾಲೂಕಿನ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ವ್ಯವಹಾರ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಬೆಳಗಾವಿ ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ನೇರವೆರಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಟಾಸ್ಕ್–ಫೋರ್ಸ್ ವಿಭಾಗದ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆ ಮತ್ತು ಅಧಿಕಾರಿಗಳಾದ ಶ್ರೀ ಸಂತೋಷ ಬಸವಣ್ಣವರ್ ರವರು ಉಪಸ್ಥಿತರಿದ್ದರು.

ಮೊದಲನೆಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವ್ಯವಹಾರ ಅಭಿವೃದ್ಧಿ ತರಬೇತಿಯ ಕುರಿತು ಉಪನ್ಯಾಸ ನೀಡಿದರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠರವರು ಸಹಕಾರಿಗಳಿಗೆ ಸುಸ್ತಿ ಸಾಲ ಬಾಕಿಗಳ ವಸೂಲಿ ಹಾಗೂ ಕಾನೂನು ಕ್ರಮಗಳ ವಿಷಯದ ಬಗ್ಗೆ ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಶ್ರೀ ಬಸವರಾಜ್

ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಇವರು ಸಹಕಾ–ರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ರಾಚಯ್ಯ ಹಿರೇಮಠ, ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿನೋದ ಮರಾಠ ನೆರವೇರಿಸಿದರು. ತರಬೇತಿಯಲ್ಲಿ ಒಟ್ಟು 77 ಸೌಹಾರ್ದ ಸಹಕಾ–ರಿಗಳಿಂದ 141 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 25.06.2026 ಗುರುವಾರ ರಂದು ಬೆಳಗಾವಿ ಜಿಲ್ಲೆಯ ಅಥಣಿ, ರಾಯಬಾಗ, ಕಾಗವಾಡ, ಚಿಕ್ಕೋಡಿ, ನಿಪ್ಪಾಣಿ, ಮೂಡಲಗಿ ಮತ್ತು ಹುಕ್ಕೇರಿ ತಾಲೂಕಿನ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳಿಗಾಗಿ ವ್ಯವಹಾರ ಅಭಿವೃದ್ಧಿ ತರಬೇತಿಯನ್ನು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘದ ಸಭಾಭವನ, ಚಿಕ್ಕೋಡಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಬೆಳಗಾವಿ ಪ್ರಾಂತದ ಟಾಸ್ಕಫೋರ್ಸ ವಿಭಾಗದ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೃಷಭನಾಥ ಪರಪ್ಪನವರ್ ನೆರವೇ–ರಿಸಿದರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಜವಾಹರ ಮುಗ್ಗನವರ ಇವರು ವಂದಿಸಿದರು.

ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಮುಖ್ಯಕಾರ್ಯ ನಿರ್ವಾಹಕರು ಹಾಗೂ ನಿರ್ದೇಶಕರ ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು. ಎರಡನೇಯ ಅವಧೀಯಲ್ಲಿ ಟಾಸ್ಕ್ ಪೊರ್ಸ ಅಧಿಕಾರಿಯಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ವ್ಯವಹಾರ ಅಭಿವೃದ್ಧಿ ಕುರಿತು ಉಪನ್ಯಾಸ ನೀಡಿದರು.

ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೃಷಭನಾಥ ಪರಪ್ಪನವರು ಆರ್ಥಿಕ ಸಬಲತೆಯ ಮಾನದಂಡಗಳ ಕುರಿತು ಮಾಹಿತಿ ನೀಡಿದರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಸಹಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ತರಬೇತಿಯಲ್ಲಿ ಒಟ್ಟು 82 ಸೌಹಾರ್ದ ಸಹಕಾರಿಗಳಿಂದ 116 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಳ್ಳಾರಿ :** ದಿನಾಂಕ 15–06–2026ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲೂಕಿನ ಸೌಹಾರ್ದ ಸಹಕಾರಿಗಳ ಕ್ಲಸ್ಟರ್ ಸಭೆಯನ್ನು ಮಟ್ಟೇಪ್ಪ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕುರುಗೋಡನಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ಜೆ ಹನುಮಂತಯ್ಯ ರವರು ಉದ್ಘಾಟಿಸಿ ಕಾಯ್ದೆ ಮತ್ತು ನಿಯಮ ಪಾಲಿಸಬೇಕು ಹಾಗೂ ಸಹಕಾರಿಯ ಉಪವಿಧಿಯನ್ನು ಎಲ್ಲಾ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ತಿಳಿದುಕೊಳ್ಳುವುದು ಅವಶ್ಯವಾಗಿದೆ ಹಾಗೂ ಸಹಕಾರಿಗಳು ದ್ರವ್ಯಸ್ತಿ ನಿಧಿ ಕಡ್ಡಾಯವಾಗಿ ನಿರ್ವಹಿಸಬೇಕೆಂದು ತಿಳಿಸಿದರು. ಸಭೆಯಲ್ಲಿ ಬುಟ್ಟಾ ಸೌಹಾರ್ದ ಸಹಕಾರಿ ನಿ., ಕುರುಗೋಡು ಇದರ ಅಧ್ಯಕ್ಷರಾದ ಶ್ರೀ ಬಸವರಾಜ್, ಮಟ್ಟೇಪ್ಪ ಸೌಹಾರ್ದ ಸಹಕಾರಿ ನಿ., ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಉಪಸ್ಥಿತರಿದ್ದರು. ಸಭೆಯಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಮಾಹಿತಿ ನೀಡಲಾಯಿತು. ಸಭೆಯಲ್ಲಿ ಕುರುಗೋಡು ತಾಲೂಕಿನ 10 ಸೌಹಾರ್ದ ಸಹಕಾರಿಗಳಿಂದ 16 ಸಹಕಾ–ರಿಗಳು ಭಾಗವಹಿಸಿದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 13.07.2026 ಮತ್ತು 14.07.2026 ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರಿಗಾಗಿ 2 ದಿನಗಳ **"ಆಡಳಿತ ಪರಿಣಿತಿ ಮತ್ತು ವ್ಯವಹಾರ ಅಭಿವೃದ್ಧಿ** ತರಬೇತಿಯ 2ನೇ ತಂಡವನ್ನು **"ಸೌಹಾರ್ದ ಸಹಕಾರಿ ಸೌಧ"**, ಮಾರ್ಗೋಸ ರಸ್ತೆ, ಮಲ್ಲೇಶ್ವರ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.
2. 8ನೇ ತಂಡದ 6 ತಿಂಗಳ ಹೊಸ ಡಿ.ಸಿ.ಬಿ.ಎಂ ಕೋರ್ಸ್ ಅನ್ನು ಆಗಸ್ಟ್ 01 2026 ರಿಂದ ಪ್ರಾರಂಭಿಸಲಾಗುವುದು.
3. ರಾಜ್ಯದಾದ್ಯಂತ ಸಂಪರ್ಕ ಸಭೆಯನ್ನು ಆಯೋಜಿಸಲಾಗಿದೆ.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

ವಸೂಲಾತಿ ಅಧಿಕಾರಿ (ನಿ.441), ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರ ಕಚೇರಿಯಲ್ಲಿ ಇದುವರೆಗೂ ಸುಮಾರು 12,000ಕ್ಕೂ ಅಧಿಕ ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳ ಮೇಲ್ವಿಚಾರಣೆ ಮಾಡುವ ಕುರಿತಂತೆ ಸದರಿ ಪ್ರಕರಣಗಳ ಪ್ರಸ್ತುತ ಹಂತದ ಮಾಹಿತಿಯನ್ನು ನಿಗದಿತ ನಮೂನೆಗಳಲ್ಲಿ ಸಲ್ಲಿಸಲು ತಿಳಿಸಿ ನಮೂನೆಗಳನ್ನು ಇ-ಮೇಲ್ ಮುಖಾಂತರ ಸೌಹಾರ್ದ ಸಹಕಾರಿಗಳಿಗೆ ರವಾನಿಸಲಾಗುತ್ತಿದೆ. ಸೌಹಾರ್ದ ಸಹಕಾರಿಗಳು ಮಾಹಿತಿಯನ್ನು ದಿನಾಂಕ 20-07-2026ರೊಳಗೆ ಕಳುಹಿಸಿಕೊಡಲು ತಿಳಿಸಿದೆ.

ಸಹಿ/-
ವಸೂಲಾತಿ ಅಧಿಕಾರಿ

## ಭೇಟಿ

**ವಿಜಯಪುರ** : ದಿನಾಂಕ 19.06.2026 ರಂದು ವಿಜಯಪುರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ವಿಜಯಪುರ ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಭೇಟಿ ನೀಡಿ ಒಕ್ಕೂಟದ ಕಾರ್ಯಗಳ ಬಗ್ಗೆ ತಿಳಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ವತಿಯಿಂದ ಮಾನ್ಯ ನಿರ್ದೇಶಕರಿಗೆ ಸನ್ಮಾನಿಸಲಾಯಿತು ಮತ್ತು ಒಕ್ಕೂಟಕ್ಕೆ 441 ನ್ಯಾಯಾಲಯದಿಂದ ಒಬ್ಬ ಸಹಾಯಕ ನಿಬಂಧಕರನ್ನು ಸಂಯುಕ್ತ ಸಹಕಾರಿಯಿಂದ ನೇಮಕ ಮಾಡಿ, ಸಾಲ ವಸೂಲಾತಿಗೆ ಅನುಕೂಲ ಮಾಡಿ ಕೊಡಲು ವಿನಂತಿಸಿದರು. ಕನಿಷ್ಠ ಪಕ್ಷ ಒಂದು ತಿಂಗಳಲ್ಲಿ ಒಂದು ದಿನ ವಿಜಯಪುರ ನಗರದಲ್ಲಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಅವಕಾಶ ಮಾಡಿ ಕೊಡಲು ವಿನಂತಿಸಿದರು. ಇದಕ್ಕೆ ಸ್ಪಂದಿಸಿದ ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿಯ ಮಂಡಳಿ ಸಭೆಯಲ್ಲಿ ಚರ್ಚಿಸುವುದಾಗಿ ಭರವಸೆ ನೀಡಿದರು. ಸಭೆಯಲ್ಲಿ ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವಿಜಯಪುರ ಸೌಹಾರ್ದ ಒಕ್ಕೂಟದ ನಿರ್ದೇಶಕರಾದ ಶ್ರೀ ಅರುಣ್ ವಾರದ, ಶ್ರೀ ದೀಲಿಪ ಶಿಂತರೆ, ಶ್ರೀ ಯಮನಪ್ಪ ಸಾತೀಹಾಳ, ಶ್ರೀ ಪರಶುರಾಮ ಚಿಂಚಲಿ, ಶ್ರೀ ಅರುಣ ಮಠ, ಶ್ರೀ ಸಿದ್ದು ಮಲ್ಲಿಕಾರ್ಜುನಮಠ, ಶ್ರೀ ಬಿರಾದಾರ್ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜ್. ಎಸ್, ಉಪಸ್ಥಿತರಿದ್ದರು.

**ವಿಜಯಪುರ** : ದಿನಾಂಕ 19.06.2026 ರಂದು ವಿಜಯಪುರ ನಗರದ ಶ್ರೀ ಸಿದ್ದೇಶ್ವರ ಸೌಹಾರ್ದ ಸಹಕಾರಿ ನಿ., ವಿಜಯಪುರ ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಭೇಟಿ ನೀಡಿ, ಸೌಹಾರ್ದ ಸಹಕಾರಿ ಚಟುವಟಿಕೆಗಳ ಬಗ್ಗೆ ವಿಚಾರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಕಲಬುರ್ಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜ್. ಎಸ್, ಉಪಸ್ಥಿತರಿದ್ದರು.

**ವಿಜಯಪುರ** : ದಿನಾಂಕ 19.06.2026 ರಂದು ವಿಜಯಪುರ ನಗರದ ಶ್ರೀ ಸೌಹಾರ್ದ ಸಹಕಾರಿ ನಿ., ವಿಜಯಪುರ ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಭೇಟಿ ನೀಡಿ, ಸೌಹಾರ್ದ ಸಹಕಾರಿಗಳ ಬೆಳವಣಿಗೆ ಗುಣಮಟ್ಟದ ಸಾಲ ನೀಡುವುದರಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು ಹಾಗೂ ಕಾಯ್ದೆ ತಿದ್ದುಪಡಿ ಅಂಶಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಂಕರಗೌಡ ಪಾಟೀಲ ರವರು, ಆಡಳಿತ ಮಂಡಳಿ ಸದಸ್ಯರು, ಕಲಬುರ್ಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜ್. ಎಸ್, ಉಪಸ್ಥಿತರಿದ್ದರು.

**ವಿಜಯಪುರ:** ದಿನಾಂಕ 19.06.2026 ರಂದು ವಿಜಯಪುರ ನಗರದ ಬಿಜಾಪುರ ಲಿಂಗಾಯತ ಡೆವಲಪ್ಮೆಂಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ ಈ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಭೇಟಿ ನೀಡಿ, ಸೌಹಾರ್ದ ಸಹಕಾರಿಯ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳು ಕಾಯ್ದೆ ಮತ್ತು ಕಾನೂನು ಬಗ್ಗೆ ಅರಿತಿರಬೇಕು ಎಂದು ತಿಳಿಸಿದರು. ಸಹಕಾರಿ ನೋಂದಣಿ ಆದ 3 ವರ್ಷದಲ್ಲಿ 450 ಕೋಟಿ ದುಡಿಯುವ ಬಂಡವಾಳ ಹೊಂದಿರುವುದಕ್ಕೆ ಅಭಿನಂದನೆ ಸಲ್ಲಿಸಿ ಉತ್ತಮವಾಗಿ ಸೇವೆ ನೀಡಲು ತಿಳಿಸಿದರು. ಈ ಸಂದರ್ಭದಲ್ಲಿ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಿಜಯಕುಮಾರ ಜತ್ತಿ ರವರು, ಸಲಹೆಗಾರಾದ ಶ್ರೀ ಕನ್ನಡಿ ರವರು, ಆಡಳಿತ ಮಂಡಳಿ ಸದಸ್ಯರು, ಕಲಬುರ್ಗಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜ್. ಎಸ್, ಉಪಸ್ಥಿತರಿದ್ದರು.

**ತುಮಕೂರು** : ದಿನಾಂಕ 20.06.2026ರಂದು ಕೆಂಗಲ್ ಸೌಹಾರ್ದ ಕೋ-ಆಪರೇಟಿವ್ ಲಿ, ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜೀ ಪಾಟೀಲ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಿ ಬೆಳವಣಿಗೆಗೆ ಅಭಿನಂದನೆಗಳನ್ನು ತಿಳಿಸಿ, ಇನ್ನು ಉತ್ತಮವಾಗಿ ಕಾರ್ಯನಿರ್ವಹಿಸಲು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು, ಅಧಿಕಾರಿಯಾದ ಶ್ರೀ ರಾಜೇಂದ್ರ ರಾವ್ ಶಿಂಧೆ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

## ಅಭಿನಂದನಾ ಕಾರ್ಯಕ್ರಮ



**ತುಮಕೂರು** : ದಿನಾಂಕ 20.06.2026 ರಂದು ಸಿದ್ಧಗಂಗಾ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಸಿದ್ಧಗಂಗಾ ನೌಕರರ ಸೌಹಾರ್ದ ಸಹಕಾರಿ ನಿ., ಇವರ ವತಿಯಿಂದ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರ ಅಭಿನಂದನಾ ಕಾರ್ಯಕ್ರಮವನ್ನು ಬಿರ್ಲಾ ಸಭಾಂಗಣ, ಎಸ್‌ಐಟಿ ಆವರಣ, ತುಮಕೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಶ್ರೀ ಸಿ.ಪಿ. ವಿಜಯ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು, ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ರವರು ಹಾಗೂ ನಿರ್ದೇಶಕರಾದ ಶ್ರೀ ಸುರೇಶ್ ರಾವ್ ರವರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



**ವಿಜಯಪುರ** : ಇಂಡಿ ಪಟ್ಟಣದಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಕ್ಷತ್ರಿಯ ಸೌಹಾರ್ದ ಸಹಕಾರಿ ಸಂಘ ನಿ., ರಾಜ್ಯ ಮಟ್ಟದ ಸಹಕಾರಿ ಸಂಘದ ಆಡಳಿತ ಮಂಡಳಿಯ ಚುನಾವಣೆಯು ಅವಿರೋಧವಾಗಿ ನೆರವೇರಿತು. ಸಂಘದ ಅಧ್ಯಕ್ಷರಾಗಿ ಸಂತೋಷ ಕ್ಷತ್ರಿಯ, ಉಪಾಧ್ಯಕ್ಷರಾಗಿ ನಾರಾಯಣ ಸಿಂಧೆ, ಕಾರ್ಯದರ್ಶಿ ನಿಂಗಣ್ಣ ಸಾಂಗ್ವೀಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ ವಿಲಾಸಕುಮಾರ ಸಿಂಧೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದೇ ಸಂದರ್ಭದಲ್ಲಿ ಐದು ವರ್ಷಗಳ ಅವಧಿಗೆ 16 ಸದಸ್ಯರ ನಿರ್ದೇಶಕ ಮಂಡಳಿಯೂ ರಚನೆಯಾಯಿತು.

ಕರ್ನಾಟಕ ಸಹಕಾರ ಚುನಾವಣಾ ಆಯೋಗದ ವತಿಯಿಂದ ನೇಮಕಗೊಂಡ ಚುನಾವಣಾಧಿಕಾರಿಗಳಾದ ಶ್ರೀ ವಿಜಯಕುಮಾರ ನಾಯಕ ಅವರ ನೇತೃತ್ವದಲ್ಲಿ ಸಂಪೂರ್ಣ ಚುನಾವಣಾ ಪ್ರಕ್ರಿಯೆ ಶಾಂತಿಯುತವಾಗಿ ಮತ್ತು ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಸಂಘದ ಮಾರ್ಗದರ್ಶಕರು ಹಾಗೂ ಸಮಾಜದ ಮುಖಂಡರಾದ ಜಗದೀಶ ಕ್ಷತ್ರಿ ಹಾಗೂ ಡಾ. ಸಣ್ಣವೀರಣ್ಣ ದೊಡ್ಡಮನಿ, ಸ್ವತಂತ್ರ ಸಿಂಧೆ ಉಪಸ್ಥಿತರಿದ್ದು ನೂತನ ಆಡಳಿತ ಮಂಡಳಿಗೆ ಶುಭಾಶಯಗಳನ್ನು ತಿಳಿಸಿದರು. ಕೊನೆಯಲ್ಲಿ ಶಿವಮೂರ್ತಿ ಕಾಟಕರ್ ವಂದನಾರ್ಪಣೆ ಸಲ್ಲಿಸಿದರು.



**ಚಿತ್ರದುರ್ಗ** : ದಿನಾಂಕ 18.06.2026ರಂದು ಚಿತ್ರದುರ್ಗ ಜಿಲ್ಲೆಯ ಸವಹಾರ್ದ ಸಹಕಾರಿಗಳ ಒಕ್ಕೂಟ ನಿ, ಚಿತ್ರದುರ್ಗ ಜಿಲ್ಲೆ ಇದರ ಅಧ್ಯಕ್ಷರಾಗಿ ಶ್ರೀ ಡಿ.ಆರ್. ತಿಪ್ಪೇಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕೇಶವರೆಡ್ಡಿ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಮತ್ತು ಒಕ್ಕೂಟದ ಎಲ್ಲಾ ನಿರ್ದೇಶಕರು ಹಾಜರಿದ್ದರು.

## ತರಬೇತಿ ಕಾರ್ಯಕ್ರಮ



**ಶಿವಮೊಗ್ಗ** : ದಿನಾಂಕ 16–05–2026 ಮತ್ತು ದಿನಾಂಕ 17–05–2026 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಶಿವಮೊಗ್ಗ ಸಹಕಾರಿ ವತಿಯಿಂದ “ಸಿಬ್ಬಂದಿ ತರಬೇತಿ ಕಾರ್ಯಕ್ರಮ”ವನ್ನು ಚೊರಡಿಯ “ಸಾನ್ವಿ ರೆಸಾರ್ಟ್”ನಲ್ಲಿ ಆಯೋಜಿಸಲಾಗಿತ್ತು. ತರಬೇತಿದಾರರಾಗಿ ಶ್ರೀಮತಿ ಮೀನಾಕ್ಷಿ ಕಂಡಿಮಟ್ ಮತ್ತು ಶ್ರೀ ವೈ.ವಿ ಗುಂಡುರಾವ್ ರವರು ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಿದ್ದರು. ಆ ಸಂದಂರ್ಭದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಶ್ರೀಶಾ ಸೌಹಾರ್ದ ಸಹಕಾರಿಯಿಂದ ಪ್ರತಿಭಾ ಪುರಸ್ಕಾರ



**ದಕ್ಷಿಣ ಕನ್ನಡ :** ದಿನಾಂಕ 07.06.2026ರಂದು ಶ್ರೀಶಾ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., ಹಂಪನಕಟ್ಟೆ, ಮಂಗಳೂರು, ವತಿಯಿಂದ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿಗಳಿಗೆ ಸಹಾಯಧನ ವಿತರಣೆ ಹಾಗೂ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ರಾಮಕೃಷ್ಣ ಆಶ್ರಮದ ಸಭಾಂಗಣ, ರಾಮಕೃಷ್ಣ ಮಠ, ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರು ಶ್ರೀ ಜಿ. ನಂಜನಗೌಡ ತಮ್ಮ ಮಾತುಗಳಲ್ಲಿ, ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ ಈ ಬಗೆಯ ಅಂಕಗಳನ್ನು ಪಡೆದಿರುವುದು ನಿಜಕ್ಕೂ ಆಶ್ಚರ್ಯ ತಂದಿದೆ. ಇವರ ಈ ಸಾಧನೆಯನ್ನು ಗುರುತಿಸಿ ಗೌರವಿಸುತ್ತಿರುವ ಶ್ರೀಶಾ ಸೌಹಾರ್ದ ಸೊಸೈಟಿ ನಮ್ಮ ಫೆಡರೇಶನಲ್ಲಿರುವುದೇ ನಮಗೆ ಹೆಮ್ಮೆ ಹಾಗೂ ಗೌರವ, ರಾಜ್ಯದಲ್ಲಿ 6500 ಸೌಹಾರ್ದ ಸೊಸೈಟಿಗಳು ಕಾರ್ಯ ನಿರ್ವಹಿಸುತ್ತಿದ್ದು ಶ್ರೀಶಾ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ., ಮಾದರಿ ಸೊಸೈಟಿಯಾಗಿ ಹೊರಹೊಮ್ಮಿದೆ. ಶ್ರೀಶಾ ಸೌಹಾರ್ದ ಸಹಕಾರಿ ಗಳಿಸಿದ ಲಾಭದ ಒಂದು ದೊಡ್ಡಪಾಲನ್ನು ಮರಳಿ ಸಮಾಜಕ್ಕೆ ಇಂತಹ ಸಮಾಜಮುಖಿ ಕಾರ್ಯಗಳ ಮೂಲಕ ನೀಡುತ್ತಿರುವುದು ಈ ಸಹಕಾರಿಯ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ ಎಂದು ಹೇಳಿದರು. ಶ್ರೀಶಾ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಂ.ಎಸ್. ಗುರುರಾಜ್ ಅವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಪರವಾಗಿ ಅಧ್ಯಕ್ಷರು ಶ್ರೀ ಜಿ. ನಂಜನಗೌಡ ರವರು ಸನ್ಮಾನಿಸಿದರು.



**ಬಾಗಲಕೋಟೆ:** ದಿನಾಂಕ 18.06.2026 ರಂದು ಲಾವಿಶ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇಲಕಲ್ಲ, ಬಾಗಲಕೋಟೆ, ಸಹಕಾರಿಯ ಪ್ರಾರಂಭೋತ್ಸವ ಹಾಗೂ ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ್ ಜ್ಯಾಂತಿಕರ ರವರು ಆಗಮಿಸಿದ್ದರು. ಸಹಕಾರಿಯನ್ನು ಉದ್ಘಾಟಿಸಿ ಸಹಕಾರ ಚಳುವಳಿ ನಡೆದು ಬಂದ ದಾರಿ, ಸಂಯುಕ್ತ ಸಹಕಾರಿಯ ಕುರಿತು ಮತ್ತು ಸಹಕಾರಿಯ ಆಡಳಿತ ಮಂಡಲಿಯ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.

ಈ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಪೂಜ್ಯಶ್ರೀ ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳು, ಜಗದ್ಗುರು ಶ್ರೀ ವೀರಭಿಕ್ಷಾವರ್ತಿ ನೀಲಕಂಠ ಮಠ ಹಳೆಹುಬ್ಬಳ್ಳಿ, ಹಾಗೂ ವೇದಮೂರ್ತಿ ಶ್ರೀ ಆನಂದ ಸ್ವಾಮಿಗಳು. ದೇವಾಂಗ ಮಠ ಗುರುಗಳು ಇಲಕಲ್ಲ ಇವರು ವಹಿಸಿದ್ದರು.


ಗೌರವ ಅತಿಥಿಗಳಾಗಿ ಮಾನ್ಯ ಶ್ರೀ ದೊಡ್ಡನಗೌಡ ಜಿ ಪಾಟೀಲ, ಮಾಜಿ ಶಾಸಕರು ಹುನಗುಂದ, ಮುಖ್ಯ ಅತಿಥಿಗಳಾಗಿ ಮಾನ್ಯಶ್ರೀ ಶೇಖರಗೌಡ ಮಾಲಿಪಾಟೀಲ, ಗುಮ್ಮಗೇರಾ, ಜಿಲ್ಲಾ ಅಧ್ಯಕ್ಷರು ಸಹಕಾರಿ ಯೂನಿಯನ್ ಕೊಪ್ಪಳ ಹಾಗೂ ಮಾಜಿ ಅಧ್ಯಕ್ಷರು ಕರ್ನಾಟಕ ರಾಜ್ಯ ಮಹಾಮಂಡಲ, ಬೆಂಗಳೂರು ಇವರು ಆಗಮಿಸಿದ್ದರು. ಅತಿಥಿಗಳಾಗಿ ಶ್ರೀ ಲಕ್ಷ್ಮಣ ಎನ್ ಗುರಂ, ಮಾಜಿ ಅಧ್ಯಕ್ಷರು ನಗರಸಭೆ ಇಲಕಲ್ಲ ಹಾಗೂ ಅಧ್ಯಕ್ಷರು ಪದ್ಮಶಾಲಿ ಸಮಾಜ ಇಲಕಲ್ಲ, ಶ್ರೀ ಲಕ್ಷ್ಮಣ ಬಿ ಅರಸಿದ್ಧಿ, ಅಧ್ಯಕ್ಷರು ಎಸ್ಎಸ್‌ಕೆ ಸಮಾಜ ಇಲಕಲ್ಲ, ಶ್ರೀ ನೀಲಕಂಠಪ್ಪ ಎಸ್ ಗೋಟೂರ, ಅಧ್ಯಕ್ಷರು ಕುರುಹಿನಶೆಟ್ಟಿ ಸಮಾಜ ಇಲಕಲ್ಲ, ನಿರ್ದೇಶಕರು ಕುರುಹಿನಶೆಟ್ಟಿ ಕೇಂದ್ರ ಸಂಘ ಬೆಂಗಳೂರು. ಹಾಗೂ ಶ್ರೀ ಪರಶುರಾಮ ಎಸ್ ಪಮ್ಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿಗಳು ಕ.ರಾ.ಸ.ನೌ.ಸಂಘ ಬೆಂಗಳೂರು, ಅಧ್ಯಕ್ಷರು ಕರ್ನಾಟಕ ರಾಜ್ಯ ಸಹಕಾರಿ ನೌಕರರ ಸಂಘ ಇಲಕಲ್ಲ ಇವರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಸ್ಥಳೀಯ ಹಿರಿಯ ಸಹಕಾರಿಗಳು, ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು, ಸಹಕಾರಿಯ ಸಿಬ್ಬಂದಿಗಳು ಹಾಗೂ ಬಾಗಲಕೋಟೆ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಶೇಗುಣಸಿ ಇವರು ಉಪಸ್ಥಿತರಿದ್ದರು.



**ಧಾರವಾಡ :** ದಿನಾಂಕ 21–06–2026 ರಂದು ರವಿವಾರ ಶ್ರೀ ಜಗದ್ಗುರು ಫಕೀರೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಯು ಪ್ರಾರಂಭವಾದ ವರ್ಷದಿಂದ ಸತತ 4ನೇ ವರ್ಷ ಯೋಗ ದಿನಾಚರಣೆಯನ್ನು ನುರಿತ ಅನುಭವವಿರುವ ಯೋಗ ಗುರುಗಳ ನೇತೃತ್ವದಲ್ಲಿ ನೆರವೇರಿಸಲಾಯಿತು. ಕಾರ್ಯಕ್ರಮವನ್ನು ಶ್ರೀ ಜಗದ್ಗುರು ಫಕೀರೇಶ್ವರ ಮಠದ ಸಭಾಭವನದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಯೋಗ ಗುರು ಶ್ರೀ ಅಲ್ತಾಫ್ ದಳವಾಯಿ, ಸಾ. ಹಿರೇನರ್ತಿ ಇವರ ಮಾರ್ಗದರ್ಶನದಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.



**ಧಾರವಾಡ** : ದಿನಾಂಕ 19.06.2026 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದ ಕರುನಾಡ ಬಸವಕೃಪ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸಭೆಯನ್ನು ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ್ ಹೊರಕೇರಿ ಇವರ ಅಧ್ಯಕ್ಷತೆಯಲ್ಲಿ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಒರ್ವ ನಿರ್ದೇಶಕರನ್ನು ಒಳಗೊಂಡಂತೆ ಸಹಕಾರಿಯ ಲೆಕ್ಕಪರಿಶೋಧಕರು ಉಪಸ್ಥಿತರಿದ್ದರು.



**ಉತ್ತರ ಕನ್ನಡ** : ದಿನಾಂಕ 22.06.2026 ರಂದು ಜೈ ದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸದಾಶಿವಗಡ ಸಹಕಾರಿಯ ಆಡಳಿತ ಮಂಡಳಿ ಸದಸ್ಯರನ್ನು ಕಾಯ್ದೆ ಕಲಂ 35 ರಡಿ ವಿಚಾರಣೆಗೆ ಒಳಪಡಿಸಲಾಗಿದ್ದು ಪ್ರಸ್ತುತ ವಿಚಾರಣೆ ಮುಂದುವರಿದಿದೆ, ಈ ಸಂಬಂಧ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ಆಡಳಿತ ಮಂಡಳಿ ಸದಸ್ಯರೊಂದಿಗೆ ಚರ್ಚಿಸಿ ಅಗತ್ಯ ಕ್ರಮಗಳನ್ನು ಸಂಯುಕ್ತ ಸಹಕಾರಿ ಜರುಗಿಸುತ್ತಿದ್ದು ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.



**ಉಡುಪಿ** : ದಿನಾಂಕ 7.06.2026 ರಂದು ಉಡುಪಿ ಸಿಂಡಿಕೇಟ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಇದರ ವಾರ್ಷಿಕ ಮಹಾಸಭೆಯು ಎಂ.ಜಿ.ಎಂ. ಕಾಲೇಜು ಆವರಣದ ರವೀಂದ್ರ ಮಂಟಪದಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯಲ್ಲಿ ಶ್ರೀ ವಿಜಯ್ ಬಿ.ಎಸ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಭಾಗವಹಿಸಿ ಸಹಕಾರಿಯ ಸದಸ್ಯರ ತಮ್ಮ ಹಕ್ಕು, ಹೊಣೆಗಾರಿಕೆ, ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿಯನ್ನು ಮತ್ತು ಸಹಕಾರಿಯ ಬೆಳವಣಿಗೆಯಲ್ಲಿ ನಿರ್ದೇಶಕರ ಪಾತ್ರದ ಕುರಿತು, ಮಾಹಿತಿ ನೀಡಲಾಯಿತು. ಸೌಹಾರ್ದ ಸಹಕಾರಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಉಗಮ, ಅಸ್ತಿತ್ವ, ಮತ್ತು ಉದ್ದೇಶಗಳ ಬೆಳವಣಿಗೆಯ ಕುರಿತು ಮಾಹಿತಿ ಹಾಗೂ ಸೌಹಾರ್ದ ಸಹಕಾರಿಯ ಅಭಿವೃದ್ಧಿಗೆ ಪೂರಕ ಅಂಶಗಳ ಬಗ್ಗೆ ಸಲಹೆಗಳನ್ನು ನೀಡಿ ಸಭೆಯನ್ನುದ್ದೇಶಿಸಿ ಮಾತನಾಡಿದರು.



**ಚನ್ನರಾಯಪಟ್ಟಣ** : ದಿನಾಂಕ: 21.06.2026 ರಂದು ಶ್ರೀ ಗುರು ರಾಘವೇಂದ್ರ ಸೌಹಾರ್ದ ಸಹಕಾರಿ ಸಂಘ ನಿ,. ನುಗ್ಗೇಹಳ್ಳಿ, ಚನ್ನರಾಯಪಟ್ಟಣ ಈ ಸಹಕಾರಿಯ ನೂತನ ಪ್ರಾರಂಭೋತ್ಸವ ಹಾಗೂ ಉದ್ಘಾಟನಾ ಕಾರ್ಯಕ್ರಮವನ್ನು ಸಂಘದ ಕಛೇರಿಯಲ್ಲಿ ಆಯೋಜಿಸಲಾಗಿ-ತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುಧೀರ್ ಕುಮಾರ್ ಪೈ, ಅಧ್ಯಕ್ಷರು ಪಡುಬಿದ್ರಿ ಸೊಸೈಟಿ ವ್ಯವಸಾಯಿಕ ಸಂಘ ನಿ, ಕಾಪು ತಾಲೂಕು, ಉಡುಪಿ ಜಿಲ್ಲೆ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಗುರು ರಾಘವೇಂದ್ರ ಸೌಹಾರ್ದ ಸಹಕಾರಿ ಸಂಘ ನಿ,. ನುಗ್ಗೇಹಳ್ಳಿ ಇದರ ಅಧ್ಯಕ್ಷರಾದ ಶ್ರೀಯುತ ಅಶೋಕ್ ಪಿ ಇವರು ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಶ್ರೀ ಗುರುಪ್ರಸಾದ್ ಬಂಗೇರ, ಮಾನ್ಯ ಪ್ರಾಂತೀಯ ಅಧಿಕಾ-ರಿಗಳು, ಮೈಸೂರು ಪ್ರಾಂತೀಯ ಕಛೇರಿ ಇವರು ಭಾಗವಹಿಸಿ ಸೌಹಾರ್ದ ಕಾಯ್ದೆಯ ಕುರಿತು ಮಾಹಿತಿ ನೀಡಿದರು ಹಾಗೂ ನೂತನ ಆಡಳಿತ ಮಂಡಳಿ ಸದಸ್ಯರಿಗೆ ಸಂಯುಕ್ತ ಸಹಕಾರಿ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನುಗ್ಗೇಹಳ್ಳಿ ಇದರ ಅಧ್ಯಕ್ಷರಾದ ಶ್ರೀ ಎನ್.ಡಿ ಶಿವಪ್ಪ, ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಹಾಗೂ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಜಿ ರವರು ಭಾಗವಹಿಸಿದ್ದರು.



**ಕಲಬುರಗಿ** : ದಿನಾಂಕ 10.06.2026ರಂದು ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತ ಬೆಂಗಳೂರು. ಇದರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಈ ಮೊದಲು ಸೌಹಾರ್ದ ದಾವಾ ಪಂಚಾಯ್ತಿ ನಿ.,(441) ನ್ಯಾಯಾಲಯದ ಪೀಠಾಧಿಕಾರಿಯಾಗಿ ಕಾರ್ಯನಿರ್ವಹಿಸಿರುವ ಹಾಗೂ ನಿವೃತ್ತ ಅಪರ ನಿಬಂಧಕರಾದ ಶ್ರೀಮತಿ ಕೆ. ಎಂ. ಆಶಾ ಇವರು ಕಲಬುರಗಿಯ ಪ್ರಾಂತೀಯ ಕಛೇರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ಹಾಗೂ ಸಂಯುಕ್ತ ಸಹಕಾ–ರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ಕಲಬುರಗಿ ಪ್ರಾಂತೀಯ ಕಛೇರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು ಹಾಗೂ ಮಾನ್ಯರಿಗೆ ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿಯ ವತಿಯಿಂದ ಸನ್ಮಾನಿಸಲಾಯಿತು.

## ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 21ನೇ ಶಾಖೆ ಶುಭಾರಂಭ



**ಪುತ್ತೂರು** : ನೆಹರುನಗರದ ಅಶ್ವಿನಿ ಕಾಂಪ್ಲೆಕ್ಸ್‌ನಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 21ನೇ ಶಾಖೆಯನ್ನು ಜೂನ್ 29ರಂದು ಉದ್ಘಾಟನೆಗೊಂಡಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಹಕಾರಿ ಕ್ಷೇತ್ರದಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘವು ಅದ್ವಿತೀಯ ಸಾಧನೆ ಮಾಡಿದ್ದು, ಕಳೆದ 25 ವರ್ಷಗಳಲ್ಲಿ ಸುಮಾರು 800 ಕೋಟಿ ವ್ಯವಹಾರ ನಡೆಸಿರುವುದು ಗಮನಾರ್ಹ ಸಾಧನೆ ಎಂದು ಶ್ಲಾಘಿಸಿದರು. ಸಹಕಾರಿಯ ಅಧ್ಯಕ್ಷ ಎಸ್.ಆರ್. ಸತೀಶ್ ಚಂದ್ರ ಅವರ ಸಮರ್ಥ ನೇತೃತ್ವದಲ್ಲಿ ಸಂಘವು ಉತ್ತಮ ರೀತಿಯಲ್ಲಿ ಬೆಳೆಯುತ್ತಿದ್ದು, ಸಿಬ್ಬಂದಿಗಳ ಸೇವಾಮನೋಭಾವ ಹಾಗೂ ಜನಸ್ನೇಹಿ ಕಾರ್ಯವೈಖರಿಯೇ ಸಂಸ್ಥೆಯ ಯಶಸ್ಸಿನ ಮೂಲ ಕಾರಣವಾಗಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಇನ್ನಷ್ಟು ಶಾಖೆಗಳನ್ನು ಆರಂಭಿಸಿ ತನ್ನ ಸೇವಾ ವ್ಯಾಪ್ತಿಯನ್ನು ವಿಸ್ತರಿಸಲಿ ಎಂದು ಶುಭ ಹಾರೈಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಅಧ್ಯಕ್ಷರಾದ ಸಹಕಾರ ರತ್ನ ಎಸ್.ಆರ್. ಸತೀಶ್ ಚಂದ್ರ ಅವರು, ಸಂಘವು ಯಶಸ್ವಿಯಾಗಿ 25 ವರ್ಷಗಳನ್ನು ಪೂರೈಸಿದ್ದು, ದೇಶದಲ್ಲೇ ಮೊದಲ ಬಾರಿಗೆ ಇ–ಸ್ಟ್ಯಾಂಪಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದ ಹೆಗ್ಗಳಿಕೆ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘಕ್ಕಿದೆ ಎಂದರು. ಶೀಘ್ರದಲ್ಲೇ ಉಳ್ಳಾಲ ಹಾಗೂ ಸಿದ್ಧಕಟ್ಟೆಯಲ್ಲಿ ಹೊಸ ಶಾಖೆಗಳನ್ನು ಆರಂಭಿಸುವ ಯೋಜನೆ ರೂಪಿಸಲಾಗಿದೆ. ಪುತ್ತೂರು ಮತ್ತು ಸಹಕಾರಿ ಕ್ಷೇತ್ರದ ನಡುವೆ ಅವಿನಾಭಾವ ಸಂಬಂಧವಿದ್ದು, ಇಲ್ಲಿಂದ ಆರಂಭವಾದ ಅನೇಕ ಸಹಕಾರಿ ಬ್ಯಾಂಕ್‌ಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿವೆ ಎಂದರು.

ಎಂಎಲ್ಸಿ ಕಿಶೋರ್ ಕುಮಾರ್ ಬೊಟ್ಯಾಡಿ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್, ಕಲ್ಲೇಗ ಕಲ್ಕುಡ ದೈವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಅಜಿತ್ ಕುಮಾರ್ ಜೈನ್, ಕಲ್ಲೇಗ ರೂರಲ್ ಡೆವಲಪ್ಮೆಂಟ್ ಟ್ರಸ್ಟ್ ಅಧ್ಯಕ್ಷ ಸಂಜೀವ ನಾಯಕ್ ಕಲ್ಲೇಗ, ನಗರಸಭೆ ಮಾಜಿ ಅಧ್ಯಕ್ಷ ಜೀವಂಧರ್ ಜೈನ್ ಹಾಗೂ ಅಶ್ವಿನಿ ಕಾಂಪ್ಲೆಕ್ಸ್ ಮಾಲಕ ಕೆ. ರಾಜಾರಾಮ ಪ್ರಭು ಉಪಸ್ಥಿತರಿದ್ದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಶ್ರೀರಂಗಪಟ್ಟಣ** : ದಿನಾಂಕ: 24.06.2026ರಂದು ನೇಗಿಲು ಸೌಹಾರ್ದ ಸಹಕಾರಿ ಸಂಘ ನಿ., ಪಾಲಹಳ್ಳಿ ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ ಈ ನೂತನ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮ ಮತ್ತು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುರಾಜ್ ಬಿ.ಟಿ ರವರು, ಸಹಕಾರಿಯ ಅಧ್ಯಕ್ಷರು ಉಪಾಧ್ಯಕ್ಷರು ಸಹಕಾರಿ ಆಡಳಿತ ಮಂಡಳಿಯ ನಿರ್ದೇಶಕರುಗಳು ಹಾಗೂ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಯವರಾದ ಶ್ರೀ ಬಲರಾಮ್ ಎನ್ ರವರು ಉಪಸ್ಥಿತರಿದ್ದರು.

# ಆದಾಯ ತೆರಿಗೆ ಕಾಯ್ದೆ, 2025 ರ ಪ್ರಕಾರ ಸಹಕಾರ ಸಂಘಗಳಲ್ಲಿ ನಡೆಸಲಾಗುವ ನಗದು ವಹಿವಾಟುಗಳ ಮಿತಿಗಳು



– ಸಿಎ. ಮಧುಕರ ಜಿ ಹೆಗಡೆ

## 1. ಹಿನ್ನೆಲೆ (Background):

1ನೇ ಏಪ್ರಿಲ್ 2026 ರಿಂದ, ಆರು ದಶಕಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿದ್ದ ಹಿಂದಿನ ಆದಾಯ ತೆರಿಗೆ ಕಾಯ್ದೆ, 1961 ರ ಬದಲಿಗೆ "ಆದಾಯ ತೆರಿಗೆ ಕಾಯ್ದೆ, 2025" ಎಂಬ ಹೊಸ ಆದಾಯ ತೆರಿಗೆ ಕಾಯ್ದೆಯು ಜಾರಿಗೆ ಬಂದಿದೆ. ಹೊಸ ಆದಾಯ ತೆರಿಗೆ ಕಾಯ್ದೆಯು ಸಹಕಾರ ಸಂಘಗಳಲ್ಲಿ ನಡೆಸಬೇಕಾದ ನಗದು ವಹಿವಾಟುಗಳ ಮೇಲೆ ಕೆಲವು ಮಿತಿಗಳನ್ನು ವಿಧಿಸುವುದರಿಂದ, ಈ ಕೆಳಗಿನ ನಿಬಂಧನೆಗಳನ್ನು ಪರಿಶೀಲಿಸುವುದು ಮುಖ್ಯವಾಗಿದೆ:

ಎ. ಉಳಿತಾಯ ಖಾತೆಗಳ (Savings Accounts) ಮೂಲಕ ನಗದು ವಹಿವಾಟುಗಳು.

ಬಿ. ಉಳಿತಾಯ ಖಾತೆಗಳ ಮೂಲಕ ₹2,00,000/– ವರೆಗಿನ ಪಾವತಿಗಳು.

ಸಿ. ಚಿಟ್ ಫಂಡ್ (Chit fund) ಸಂಗ್ರಹಣೆಗಳು.

ಡಿ. ಕಾನೂನು ಇತ್ಯರ್ಥಗಳಲ್ಲಿ (Legal settlements) ನಗದು ಪಾವತಿಗಳು.

ಇ. ₹10,000/– ಕ್ಕಿಂತ ಹೆಚ್ಚಿನ ನಗದು ರೂಪದ ವ್ಯಾಪಾರ ವೆಚ್ಚಗಳು.

## 2. ಕಾನೂನು ಚೌಕಟ್ಟು (Legal Framework) :

ಆದಾಯ ತೆರಿಗೆ ಕಾಯ್ದೆ, 1961 ರ ಬದಲಿಗೆ, ಆದಾಯ ತೆರಿಗೆ ಕಾಯ್ದೆ, 2025 ರ ನಿಬಂಧನೆಗಳು 1ನೇ ಏಪ್ರಿಲ್ 2026 ರಿಂದ ಜಾರಿಗೆ ಬಂದಿವೆ. ಸರಳೀಕರಣಕ್ಕಾಗಿ ಶಾಸನವನ್ನು ಮರು–ಕರಡು ಮಾಡಲಾಗಿದ್ದರೂ ಮತ್ತು ಮರು–ಸಂಖ್ಯೆ ನೀಡಲಾಗಿದ್ದರೂ, ನಗದು ವಹಿವಾಟುಗಳು, ತೆರಿಗೆ ವಂಚನೆ ತಡೆಗಟ್ಟುವ ಕ್ರಮಗಳು ಮತ್ತು ದಂಡನಾತ್ಮಕ ಪರಿಣಾಮಗಳನ್ನು ನಿಯಂತ್ರಿಸುವ ಮೂಲ ತತ್ವಗಳು ಹೆಚ್ಚಾಗಿ ಬದಲಾಗದೆ ಉಳಿದಿವೆ.

**ಅನುಸರಣೆಯ ಸುಲಭತೆಗಾಗಿ, ಸಂಬಂಧಿತ ನಿಬಂಧನೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:**

| ಆದಾಯ ತೆರಿಗೆ ಕಾಯ್ದೆ, 2025 ರ ಸೆಕ್ಷನ್ | ಆದಾಯ ತೆರಿಗೆ ಕಾಯ್ದೆ, 1961 ರ ಸೆಕ್ಷನ್ | ನಿಬಂಧನೆಗಳು |
|---|---|---|
| 185 | 269SS | ನಗದು ರೂಪದಲ್ಲಿ ಸಾಲಗಳು/ ಠೇವಣಿಗಳು/ನಿಗದಿತ ಮೊತ್ತವನ್ನು ಸ್ವೀಕರಿಸುವುದಕ್ಕೆ ನಿಷೇಧ |
| 186 | 269ST | ಒಟ್ಟಾರೆಯಾಗಿ ₹2 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ನಗದನ್ನು ಸ್ವೀಕರಿಸುವುದರ ಮೇಲಿನ ನಿರ್ಬಂಧ |
| 188 | 269T | ನಗದು ರೂಪದಲ್ಲಿ ಸಾಲಗಳು/ ಠೇವಣಿಗಳನ್ನು ಮರುಪಾವತಿ ಮಾಡುವುದಕ್ಕೆ ನಿಷೇಧ |
| 187 | 269SU | ನಿಗದಿತ ಎಲೆಕ್ಟ್ರಾನಿಕ್ ವಿಧಾನಗಳ ಕಡ್ಡಾಯ ಸ್ವೀಕೃತಿ |

ಉಲ್ಲಂಘನೆಗಾಗಿ ವಿಧಿಸಲಾಗುವ ದಂಡವು, ನಗದು ರೂಪದಲ್ಲಿ ಪಡೆದ ಅಥವಾ ಮರುಪಾವತಿಸಿದ ಮೊತ್ತದ 100% ಆಗಿರುತ್ತದೆ ಮತ್ತು ಇದನ್ನು ಸಂಬಂಧಿತ ದಂಡದ ನಿಬಂಧನೆಗಳ ಅಡಿಯಲ್ಲಿ ವಿಧಿಸಲಾಗುತ್ತದೆ.

### 3.1. ಉಳಿತಾಯ, ಸಾಲ, ಪಿಗ್ಮಿ ಮತ್ತು ಖಾತೆ ಮುಕ್ತಾಯಗಳ ನಗದು ವಹಿವಾಟು ಮಿತಿಗಳು:

- **ಸೆಕ್ಷನ್ 185 (₹20,000/– ಮಿತಿ) :** ಸಂಘಗಳು ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಒಬ್ಬನೇ ವ್ಯಕ್ತಿಯಿಂದ ₹20,000/– ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಯಾವುದೇ ಸಾಲ ಅಥವಾ ಠೇವಣಿಯನ್ನು (ಪಿಗ್ಮಿ, ಆರ್ಡಿ, ಎಫ್ಡಿ ಸೇರಿದಂತೆ) ನಗದು ರೂಪದಲ್ಲಿ ಸ್ವೀಕರಿಸುವಂತಿಲ್ಲ. ಇದು ಒಂದೇ ಠೇವಣಿಗೆ ಹಾಗೂ ಆ ವರ್ಷದಲ್ಲಿ ಆ ಸದಸ್ಯನಿಂದ ಪಡೆದ ಒಟ್ಟು ನಗದು ಠೇವಣಿಗಳಿಗೆ ಅನ್ವಯಿಸುತ್ತದೆ. ಆದ್ದರಿಂದ, ಪಿಗ್ಮಿ ಠೇವಣಿಗಳ ನಗದು ಸಂಗ್ರಹಣೆಯನ್ನು ₹19,999/– ಕ್ಕೆ ಸೀಮಿತಗೊಳಿಸಬೇಕು. ಅದರ ನಂತರ ಪಿಗ್ಮಿ ಠೇವಣಿ ಖಾತೆಯನ್ನು ಮುಚ್ಚಬೇಕು. ಆದಾಗ್ಯೂ, ಸದಸ್ಯರ ಉಳಿತಾಯ ಖಾತೆಗೆ ಸಂಬಂಧಿಸಿದಂತೆ, ಹಣಕಾಸು ವರದಿಗಳಲ್ಲಿ ನಾವು ಉಳಿತಾಯ ಖಾತೆಗಳನ್ನು 'ಠೇವಣಿಗಳು' ಅಡಿಯಲ್ಲಿ ವರ್ಗೀಕರಿಸುವುದರಿಂದ ಅದೇ ಮಿತಿ (₹20,000/–) ಅನ್ವಯಿಸುತ್ತದೆಯಾದರೂ, ಸಂಘಗಳಿಗೆ ನಗದು ವಹಿವಾಟುಗಳನ್ನು ಸಾದರಿ ಮಿತಿಗೆ ನಿರ್ಬಂಧಿಸುವುದು ಕಷ್ಟವಾಗಬಹುದು. ಪ್ರಾಯೋಗಿಕವಾಗಿ ಸಂಘಗಳು ಸದಸ್ಯರ ಉಳಿತಾಯ ಖಾತೆಗೆ ₹1,99,999/– ವರೆಗೆ ಸ್ವೀಕರಿಸುತ್ತಿವೆ. ಅಂತಹ ವಹಿವಾಟುಗಳ ಮೇಲಿನ 100% ದಂಡವನ್ನು ತಪ್ಪಿಸಲು ನಗದು ವಹಿವಾಟುಗಳನ್ನು ಮಿತಿಗೊಳಿಸಲು ಸಲಹೆ ನೀಡಲಾಗುತ್ತದೆ.

- **ಸೆಕ್ಷನ್ 188 (ಮರುಪಾವತಿ) :** ಪಿಗ್ಮಿ/ಎಫ್‌ಡಿ ಗಳ ಮುಕ್ತಾಯ ಅಥವಾ ಖಾತೆ ಮುಚ್ಚುವಿಕೆ ಸೇರಿದಂತೆ ಯಾವುದೇ ಠೇವಣಿಯ ಮರುಪಾವತಿಯು (ಬಡ್ಡಿ ಸೇರಿದಂತೆ) ₹20,000/– ಮೀರಿದರೆ ಅದನ್ನು ನಗದು ರೂಪದಲ್ಲಿ ಪಾವತಿಸುವಂತಿಲ್ಲ. ಇದನ್ನು ಅಕೌಂಟ್ ಪೇಯಿ ಚೆಕ್ (account payee cheque), ಡ್ರಾಫ್ಟ್ ಅಥವಾ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್ (NEFT/RTGS/UPI) ಮೂಲಕವೇ ಪಾವತಿಸಬೇಕು. ಸಂಘಗಳು ಸಾಮಾನ್ಯವಾಗಿ ವಹಿವಾಟುಗಳನ್ನು ಸದಸ್ಯರ ಉಳಿತಾಯ ಖಾತೆಯ

ಮೂಲಕವೇ ನಡೆಸುವ ಪದ್ಧತಿಯನ್ನು ಅಳವಡಿಸಿಕೊಂಡಿವೆ. ಆದಾಗ್ಯೂ, ₹20,000/– ಕ್ಕಿಂತ ಹೆಚ್ಚಿನ ನಗದು ವಹಿವಾಟುಗಳನ್ನು ನಿರ್ಬಂಧಿಸಲು ಸಲಹೆ ನೀಡಲಾಗುತ್ತದೆ.

- **ಸೆಕ್ಷನ್ 186 (ಒಟ್ಟು ₹2 ಲಕ್ಷ) :** ನೀವು ಒಬ್ಬನೇ ವ್ಯಕ್ತಿಯಿಂದ ದಿನವೊಂದರಲ್ಲಿ ಒಟ್ಟಾರೆಯಾಗಿ, ಅಥವಾ ಒಂದೇ ವಹಿವಾಟಿಗೆ ಸಂಬಂಧಿಸಿದಂತೆ, ಅಥವಾ ಒಂದು ಘಟನೆ ಅಥವಾ ಸಂದರ್ಭಕ್ಕೆ ಸಂಬಂಧಿಸಿದ ವಹಿವಾಟುಗಳಿಗಾಗಿ ₹2,00,000/– ಅಥವಾ ಅದಕ್ಕಿಂತ ಹೆಚ್ಚಿನ ನಗದನ್ನು ಸ್ವೀಕರಿಸುವಂತಿಲ್ಲ. ಇದು ಅತ್ಯುನ್ನತ ಮಿತಿಯಾಗಿದೆ (overriding limit).

- **ಪ್ಯಾನ್ (PAN) ಕಡ್ಡಾಯ :** ದಿನವೊಂದರಲ್ಲಿ ₹50,000/– ಕ್ಕಿಂತ ಹೆಚ್ಚಿನ ಯಾವುದೇ ನಗದು ಠೇವಣಿ ಅಥವಾ ಹಿಂಪಡೆಯುವಿಕೆಗೆ, ನಿಯಮ 114ಃ ರ ಪ್ರಕಾರ ಸದಸ್ಯರ ಪ್ಯಾನ್ (ಅಥವಾ ಫಾರ್ಮ್ 60) ಪಡೆಯುವುದು ಕಡ್ಡಾಯವಾಗಿರುತ್ತದೆ.

### 3.2. ಉಳಿತಾಯ ಖಾತೆಯ ಮೂಲಕ ₹2 ಲಕ್ಷಕ್ಕಿಂತ ಕೆಳಗಿನ ಪಾವತಿಗಳು:

ಸದಸ್ಯರ ಉಳಿತಾಯ ಖಾತೆಯಿಂದ ₹2 ಲಕ್ಷಕ್ಕಿಂತ ಕಡಿಮೆ ನಗದು ಹಿಂಪಡೆಯುವುದು ಅಥವಾ ಪಾವತಿಸುವುದನ್ನು ಸೆಕ್ಷನ್ 186 ರ ಅಡಿಯಲ್ಲಿ ನೇರವಾಗಿ ನಿಷೇಧಿಸಲಾಗಿಲ್ಲ. ಆದಾಗ್ಯೂ, ಸೆಕ್ಷನ್ 188 ರ ಅಡಿಯ ಮರುಪಾವತಿ ಮಿತಿಯು ಇನ್ನೂ ಅನ್ವಯಿಸುತ್ತದೆ– ಠೇವಣಿ ಮುಚ್ಚುವಿಕೆ ಅಥವಾ ಮರುಪಾವತಿಯ ರೂಪದಲ್ಲಿರುವ ₹20,000/– ಕ್ಕಿಂತ ಹೆಚ್ಚಿನ ಯಾವುದೇ ಹಿಂಪಡೆಯುವಿಕೆಯು ಬ್ಯಾಂಕಿಂಗ್ ಚಾನೆಲ್ಗಳ ಮೂಲಕವೇ ಇರಬೇಕು, ನಗದು ರೂಪದಲ್ಲಲ್ಲ.

ಪ್ರತಿಯೊಂದು ಪಾವತಿಯನ್ನು ₹2 ಲಕ್ಷಕ್ಕಿಂತ ಕಡಿಮೆ (ಅಥವಾ ₹20,000/– ಕ್ಕಿಂತ ಕಡಿಮೆ) ಇರಿಸಲು, ಒಂದೇ ದಿನದಲ್ಲಿ ಅಥವಾ ಸತತ ದಿನಗಳಲ್ಲಿ ಒಂದೇ ಪಾವತಿಯನ್ನು ಹಲವು ನಗದು ವಹಿವಾಟುಗಳಾಗಿ ವಿಭಜಿಸುವುದನ್ನು ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ, ಏಕೆಂದರೆ ಸೆಕ್ಷನ್ 186 ನಿರ್ದಿಷ್ಟವಾಗಿ "ಒಂದೇ ವಹಿವಾಟಿಗೆ ಸಂಬಂಧಿಸಿದಂತೆ" ಅಥವಾ "ಒಂದು ಘಟನೆ ಅಥವಾ ಸಂದರ್ಭಕ್ಕೆ ಸಂಬಂಧಿಸಿದ" ವಹಿವಾಟುಗಳನ್ನು ಒಟ್ಟುಗೂಡಿಸಿ ಲೆಕ್ಕ ಹಾಕುತ್ತದೆ.

**ಉತ್ತಮ ಅಭ್ಯಾಸ :** ದೈನಂದಿನ ವಾಡಿಕೆಯ ನಗದು ಹಿಂಪಡೆಯುವಿಕೆಗಳನ್ನು ₹20,000/– ಕ್ಕಿಂತ ಕಡಿಮೆ ಮಿತಿಗೊಳಿಸಿ. ಹೆಚ್ಚಿನ ಮೊತ್ತಕ್ಕಾಗಿ, ಸದಸ್ಯರ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಒತ್ತಾಯಿಸಿ.

### 3.3. ಚಿಟ್ ಫಂಡ್ ಸಂಗ್ರಹಣೆಗಳು (Chit Fund Collections):

ಪ್ರತಿಯೊಬ್ಬ ಸದಸ್ಯರಿಂದ ₹20,000/– ಕ್ಕಿಂತ ಹೆಚ್ಚಿನ ಚಿಟ್ ಫಂಡಗಳನ್ನು ನಗದು ರೂಪದಲ್ಲಿ ಸಂಗ್ರಹಿಸುವ ಪದ್ಧತಿಗೆ ಅವಕಾಶವಿಲ್ಲ.

ಸದಸ್ಯರಿಂದ ನಗದು ರೂಪದಲ್ಲಿ ₹20,000/– ಸಂಗ್ರಹಿಸುವುದು ಸೆಕ್ಷನ್ 185 ರ ₹20,000/– ಮಿತಿಯನ್ನು ಮೀರುತ್ತದೆ ಮತ್ತು ಇದು ಸಂಘದ ಮೇಲೆ 100% ದಂಡವನ್ನು ಆಕರ್ಷಿಸುತ್ತದೆ.

**ಶಿಫಾರಸು:** ₹19,999/– ಕ್ಕಿಂತ ಹೆಚ್ಚಿನ ಎಲ್ಲಾ ಚಿಟ್ ಫಂಡ್ ವಂತಿಗೆಗಳನ್ನು ಕೇವಲ NEFT/IMPS/UPI ಮೂಲಕ ಅಥವಾ ಚೆಕ್ ಮೂಲಕ ಬ್ಯಾಂಕ್ ಖಾತೆಯ ಮೂಲಕವೇ ಪಾವತಿಸುವುದನ್ನು ಕಡ್ಡಾಯಗೊಳಿಸಿ. ಸಂಘ/ಶಾಖೆಗಳಲ್ಲಿ ಲಭ್ಯವಿದ್ದಲ್ಲಿ QR ಕೋಡ್/UPI ಸೌಲಭ್ಯಗಳನ್ನು ಒದಗಿಸಿ.

### 3.4. ಕಾನೂನು ಇತ್ಯರ್ಥಗಳಲ್ಲಿ ನಗದು ಪಾವತಿಗಳು:

ಕಾನೂನು ಇತ್ಯರ್ಥಗಳು (legal settlements), ರಾಜಿ ತೀರ್ಪುಗಳು (compromise decrees), ಮಧ್ಯಸ್ಥಿಕೆ ತೀರ್ಪುಗಳು (arbitration awards) ಅಥವಾ ಲೋಕ ಅದಾಲತ್ ಇತ್ಯರ್ಥಗಳಿಗೆ ಆದಾಯ ತೆರಿಗೆ ಕಾಯ್ದೆ, 2025 ರ ಅಡಿಯಲ್ಲಿ ಯಾವುದೇ ನಿರ್ದಿಷ್ಟ ವಿನಾಯಿತಿ ಇಲ್ಲ. ಅಂತಹ ಸಂದರ್ಭಗಳಲ್ಲಿ ಯಾವುದೇ ನಗದು ಪಾವತಿ ಅಥವಾ ಸ್ವೀಕೃತಿಯು ಸೆಕ್ಷನ್ 185, 186 ಮತ್ತು 188 ಅನ್ನು ಸಂಪೂರ್ಣವಾಗಿ ಪಾಲಿಸಬೇಕು.

ಇತ್ಯರ್ಥವು ಠೇವಣಿ/ಸಾಲದ ಮರುಪಾವತಿ ಅಥವಾ ₹20,000/– ಮೀರಿದ ಪಾವತಿಯನ್ನು ಒಳಗೊಂಡಿದ್ದರೆ, ಅದು ಬ್ಯಾಂಕಿಂಗ್ ಚಾನೆಲ್ಗಳ ಮೂಲಕವೇ ಆಗಿರಬೇಕು. ಇತ್ಯರ್ಥಕ್ಕಾಗಿ ₹2 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ನಗದನ್ನು ಸ್ವೀಕರಿಸುವುದು, ನ್ಯಾಯಾಲಯದ ನಿರ್ದೇಶನದ ಹೊರತಾಗಿಯೂ ಸೆಕ್ಷನ್ 186 ರ ಅಡಿಯಲ್ಲಿ ನಿಷೇಧಿಸಲಾಗಿದೆ. ಇತ್ಯರ್ಥದ ಮೊತ್ತವನ್ನು ಕೇವಲ ಡಿಮಾಂಡ್ ಡ್ರಾಫ್ಟ್ (Demand Draft) ಅಥವಾ RTGS ಮೂಲಕ ಮಾತ್ರ ಪಡೆಯಲು ನಾವು ಸಲಹೆ ನೀಡುತ್ತೇವೆ.

ಈ ಅಭಿಪ್ರಾಯವನ್ನು 01.04.2026 ರಿಂದ ಜಾರಿಗೆ ಬಂದಿರುವ ಆದಾಯ ತೆರಿಗೆ ಕಾಯ್ದೆ, 2025 ರ ನಿಬಂಧನೆಗಳು ಮತ್ತು ನೀವು ಒದಗಿಸಿದ ಮಾಹಿತಿಯ ಆಧಾರದ ಮೇಲೆ ನೀಡಲಾಗಿದೆ. ಇದನ್ನು ಆಡಿಟ್ ಪುರಾವೆ ಅಥವಾ ತೆರಿಗೆ ಅಧಿಕಾರಿಗಳಿಂದ ಬಂದ ಬದ್ಧ ತೀರ್ಪು ಎಂದು ಪರಿಗಣಿಸಬಾರದು.

### 3.5. ₹10,000/– ಕ್ಕಿಂತ ಹೆಚ್ಚಿನ ನಗದು ರೂಪದ ವ್ಯಾಪಾರ ವೆಚ್ಚಗಳು:

ದಿನವೊಂದರಲ್ಲಿ ಒಬ್ಬ ವ್ಯಕ್ತಿಗೆ ವೆಚ್ಚಕ್ಕಾಗಿ ಮಾಡಿದ ಪಾವತಿ ಅಥವಾ ಒಟ್ಟು ಪಾವತಿಗಳು ₹10,000/– ಮೀರಿದರೆ ಮತ್ತು ಅದನ್ನು ಅಕೌಂಟ್ ಪೇಯಿ ಚೆಕ್ ಅಥವಾ ಬ್ಯಾಂಕ್ ಡ್ರಾಫ್ಟ್ ಅಥವಾ ಬ್ಯಾಂಕ್ ಖಾತೆಯ ಮೂಲಕ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸಿಸ್ಟಮ್ ಅಥವಾ ನಿಗದಿತ ಎಲೆಕ್ಟ್ರಾನಿಕ್ ವಿಧಾನಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿಧಾನದ ಮೂಲಕ ಪಾವತಿಸಿದರೆ, ಅಂತಹ ವೆಚ್ಚಕ್ಕೆ ಯಾವುದೇ ಕಡಿತವನ್ನು (deduction) ಅನುಮತಿಸಲಾಗುವುದಿಲ್ಲ.

**ಗಮನಿಸಿ :** ಮೇಲಿನ ಮಾಹಿತಿಯು ಈ ಲೇಖನದ ಲೇಖಕರು ಕಾಯ್ದೆಯನ್ನು ಅರ್ಥಮಾಡಿಕೊಂಡಿರುವುದರ ಆಧಾರದ ಮೇಲೆ ಇದೆ ಮತ್ತು ಇದನ್ನು ಯಾವುದೇ ವೇದಿಕೆಯಲ್ಲಿ ಯಾವುದೇ ಪುರಾವೆಯಾಗಿ ಬಳಸಲಾಗುವುದಿಲ್ಲ. ನಿಬಂಧನೆಗಳ ವಿವರವಾದ ತಿಳುವಳಿಕೆಗಾಗಿ ತಜ್ಞರನ್ನು ಸಂಪರ್ಕಿಸಲು ಸಲಹೆ ನೀಡಲಾಗುತ್ತದೆ.

# ಡಿಜಿಟಲ್ ಸಹಕಾರಿಗಳು, ಡಿಜಿಟಲ್ ಭಾರತ ತಂತ್ರಜ್ಞಾನವನ್ನು ಕಟ್ಟ ಕಡೆಯ ಗ್ರಾಮದವರೆಗೆ ತಲುಪಿಸುವಿಕೆ

ಮೂಲ : ಡಾ. ದೀಕ್ಷಾ ಶರ್ಮಾ, ಉಪನ್ಯಾಸಕಿ, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಸೆಕ್ಟರ್ 32 ಸಿ, ಚಂಡೀಗಢ.

ಅನುವಾದ : ದಿವ್ಯ ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.

## ಪ್ರಸ್ತಾವನೆ (Preamble) :

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪಾತ್ರ ಬಹಳ ಮಹತ್ವದ್ದಾಗಿದ್ದು, ಈ ದೇಶದ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿತನವನ್ನು ಗಳಿಸಿಕೊಟ್ಟಿರುವ ಹೆಗ್ಗಳಿಕೆ ಈ ಕ್ಷೇತ್ರಕ್ಕೆ ಸಲ್ಲುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರ ಈ ದೇಶದಲ್ಲಿ ಹಸಿರು ಕ್ರಾಂತಿಯನ್ನು ಮಾಡುವುದರ ಮೂಲಕ ಈ ದೇಶದ ರೈತರ, ಹಿಂದುಳಿದ ವರ್ಗದವರ, ರೈತ ಕಾರ್ಮಿಕರ ಕಾಮಧೇನುವಾಗಿ ಪರಿಣಮಿಸಿದೆ. ಇಂತಹ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಇನ್ನೂ ಹೆಚ್ಚು ಬಲಪಡಿಸುವಂತೆ ಕೇಂದ್ರ ಸರ್ಕಾರದ "ಸಹಕಾರ್ ಸೇ ಸಮೃದ್ಧಿ" ಎಂಬ ಘೋಷ ವಾಕ್ಯ ಹಾಗೂ ಅದರ ಅನುಷ್ಠಾನವನ್ನು ನಾವು ಗಮನಿಸಬಹುದಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಈ ಕ್ಷೇತ್ರವನ್ನು ಅಧ್ಯಯನ ಮಾಡುವುದರ ಮೂಲಕ ತಮ್ಮ ಕಾರ್ಯಚಟುವಟಿಕೆಗಳನ್ನು ಇನ್ನೂ ಹೆಚ್ಚಿಸಿಕೊಳ್ಳಲು ಇರುವ ಅವಕಾಶಗಳತ್ತ ಗಮನಹರಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ "ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಡಿಜಿಟಲ್ ಸಹಕಾರಿಗಳು, ಡಿಜಿಟಲ್ ಭಾರತ" ಎಂಬ ಈ ಲೇಖನವನ್ನು ಪ್ರಸ್ತುತಪಡಿಸಲಾಗಿದೆ.

ಡಿಜಿಟಲ್ ಸಹಕಾರಿ ಪರಿವರ್ತನೆಯ ಮಾದರಿಯು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೂ ಅತ್ಯಂತ ಉಪಯುಕ್ತ ಮಾರ್ಗದರ್ಶನವನ್ನು ನೀಡುತ್ತದೆ. ವಿಶೇಷವಾಗಿ ಇಆರ್‌ಪಿ ಆಧಾರಿತ ಆಡಳಿತ ವ್ಯವಸ್ಥೆ, ಡಿಜಿಟಲ್ ಲೆಕ್ಕಪತ್ರ ನಿರ್ವಹಣೆ, ಪಾರದರ್ಶಕ ಸಾಲ ವಿತರಣೆ, ದತ್ತಾಂಶ ಆಧಾರಿತ ನಿರ್ಧಾರ ಕೈಗೊಳ್ಳುವಿಕೆ, ಗ್ರಾಮೀಣ ಮಟ್ಟದಲ್ಲಿ ಡಿಜಿಟಲ್ ಸೇವೆಗಳ ವಿಸ್ತರಣೆ ಹಾಗೂ ಸದಸ್ಯ ಕೇಂದ್ರಿತ ಸೇವಾ ವಿತರಣೆಯಂತಹ ಅಂಶಗಳನ್ನು ಸೌಹಾರ್ದ ಸಹಕಾರಿ ಸಂಸ್ಥೆಗಳು ಅಳವಡಿಸಿಕೊಳ್ಳುವ ಮೂಲಕ ತಮ್ಮ ಕಾರ್ಯಕ್ಷಮತೆ, ವಿಶ್ವಾಸಾರ್ಹತೆ ಮತ್ತು ಸೇವಾ ವ್ಯಾಪ್ತಿಯನ್ನು ಮತ್ತಷ್ಟು ಬಲಪಡಿಸಬಹುದು. ಡಿಜಿಟಲ್ ತಂತ್ರಜ್ಞಾನವನ್ನು ಸಹಕಾರ ಚಳುವಳಿಯೊಂದಿಗೆ ಸಮನ್ವಯಗೊಳಿಸುವ ಮೂಲಕ ಗ್ರಾಮೀಣ ಹಾಗೂ ನಗರ ಸದಸ್ಯರಿಗೆ ವೇಗವಾದ, ಪಾರದರ್ಶಕ ಮತ್ತು ಸುಲಭ ಸೇವೆಗಳನ್ನು ಒದಗಿಸುವ ದಿಕ್ಕಿನಲ್ಲಿ ಈ ಲೇಖನವು ಪ್ರೇರಣಾದಾಯಕ ಚಿಂತನೆಗಳನ್ನು ಒದಗಿಸುತ್ತದೆ. ಇದೇ ಉದ್ದೇಶದಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಆಡಳಿತ ಮಂಡಲಿ, ಸಿಬ್ಬಂದಿ ಹಾಗೂ ಸದಸ್ಯರಿಗೆ ಮಾರ್ಗದರ್ಶಕವಾಗುವ ನಿಟ್ಟಿನಲ್ಲಿ ಈ ಲೇಖನವನ್ನು ಪ್ರಕಟಿಸಲಾಗಿದೆ.

## ಪರಿಚಯ :

ಭಾರತದ ಸಹಕಾರ ಕ್ಷೇತ್ರವು ಅಪೂರ್ವವಾದ ಡಿಜಿಟಲ್ ಆಧುನೀಕರಣದ ಹಂತವನ್ನು ಅನುಭವಿಸುತ್ತಿದೆ. ಸಾಂಪ್ರದಾಯಿಕವಾಗಿ ಹಸ್ತಚಾಲಿತ ದಾಖಲೆಗಳ ನಿರ್ವಹಣೆ ಮತ್ತು ಕಾಗದ-ಚಾಲಿತ ಪ್ರಕ್ರಿಯೆಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದ ಸಹಕಾರ ಸಂಸ್ಥೆಗಳು – ವಿಶೇಷವಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS) ಈಗ ಡಿಜಿಟಲ್ ಸೌಲಭ್ಯ ಹೊಂದಿದ, ಪಾರದರ್ಶಕ ಮತ್ತು ಸೇವಾ-ಆಧಾರಿತ ಸಂಸ್ಥೆಗಳಾಗಿ ಪರಿವರ್ತನೆಯಾಗುತ್ತಿವೆ. ಈ ರೂಪಾಂತರವು "ಸಹಕಾರದಿಂದ ಸಮೃದ್ಧಿ" ಎಂಬ ಭಾರತ ಸರ್ಕಾರದ ದೃಷ್ಟಿಕೋನದ ಪ್ರಮುಖ ಆಧಾರ ಸ್ತಂಭವಾಗಿದ್ದು, ಇದು ಆಡಳಿತವನ್ನು ಬಲಪಡಿಸುವುದು, ಆರ್ಥಿಕ ಪ್ರವೇಶವನ್ನು ವೃದ್ಧಿಸುವುದು ಹಾಗೂ ಗ್ರಾಮೀಣ ಭಾರತದಾದ್ಯಂತ ಡಿಜಿಟಲ್ ಹೆಜ್ಜೆಗುರುತನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ.

## ಡಿಜಿಟಲ್ ಆಧುನೀಕರಣ : ಹಸ್ತಚಾಲಿತ ಪ್ರಕ್ರಿಯೆಗಳಿಂದ ಏಕೀಕೃತ ವ್ಯವಸ್ಥೆಗಳತ್ತ :

ಡಿಜಿಟಲ್ ಸುಧಾರಣಾ ಉಪಕ್ರಮಗಳ ಮೊದಲು, ಸಹಕಾರ ಸಂಸ್ಥೆಗಳ ಕಾರ್ಯವೈಖರಿಯು ಭೌತಿಕ ಲೆಡ್ಜರ್‌ಗಳು, ಹಸ್ತಚಾಲಿತ ಲೆಕ್ಕಪರಿಶೋಧನೆಗಳು ಮತ್ತು ವಿಭಜಿತ ದತ್ತಾಂಶ ವ್ಯವಸ್ಥೆಗಳ ಮೇಲೆ ಬಹುಮಟ್ಟಿಗೆ ಅವಲಂಬಿತವಾಗಿತ್ತು.

ಈ ಕಾರ್ಯಾಚರಣೆಯ ಮಿತಿಗಳನ್ನು ನಿವಾರಿಸಲು, ಸರ್ಕಾರವು ನಬಾರ್ಡ್ ಮೂಲಕ ಜಾರಿಗೊಳಿಸಲಾದ PACS ಗಣಕೀಕರಣ ಯೋಜನೆಯನ್ನು ₹2,516 ಕೋಟಿಗಳ ವೆಚ್ಚದಲ್ಲಿ ಪ್ರಾರಂಭಿಸಿತು. ಈ ಯೋಜನೆಯ ಉದ್ದೇಶವು ಸುಮಾರು 90,000 PACSಗಳನ್ನು ಏಕೀಕೃತ ERP ಆಧಾರಿತ ಡಿಜಿಟಲ್ ಪರಿಸರ ವ್ಯವಸ್ಥೆಗೆ ಒಗ್ಗೂಡಿಸುವುದಾಗಿದ್ದು, ಇದು ಜಗತ್ತಿನ ಅತಿದೊಡ್ಡ ಡಿಜಿಟಲ್ ಸಂಪರ್ಕ ಹೊಂದಿದ ಗ್ರಾಮೀಣ ಸಹಕಾರ ಜಾಲಗಳಲ್ಲಿ ಒಂದನ್ನು ಸೃಷ್ಟಿಸುತ್ತದೆ.

## ERP ಏಕೀಕರಣ : ಡಿಜಿಟಲ್ ಆಡಳಿತದ ಬೆನ್ನೆಲುಬಿನ ಸ್ಥಾಪನೆ :

ERP ವೇದಿಕೆಯು ಮೂರು ಹಂತಗಳ ಸಹಕಾರಿ ಸಾಲ ವ್ಯವಸ್ಥೆಗೆ PACS, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು (DCCBs) ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳು (StCBs) ಇವುಗಳಿಗೆ ಸಮಗ್ರ ಡಿಜಿಟಲ್ ಅಡಿಪಾಯವನ್ನು ಒದಗಿಸುತ್ತದೆ.

## ಪ್ರಮುಖ ಕಾರ್ಯಾತ್ಮಕ ಸುಧಾರಣೆಗಳು :

- ನೈಜ-ಸಮಯದ ಲೆಕ್ಕಪತ್ರ ನಿರ್ವಹಣೆ ಮತ್ತು ಸ್ವಯಂಚಾಲಿತ ಹಣಕಾಸು ಕಾರ್ಯಪ್ರವಾಹಗಳು
- ಆನ್‌ಲೈನ್ ಲೆಕ್ಕಪರಿಶೋಧನೆಯ ಸಿದ್ಧತೆ ಮತ್ತು ಪ್ರಮಾಣೀಕೃತ ವರದಿ ಮಾಡುವಿಕೆ
- ರಾಷ್ಟ್ರೀಯ ಸಹಕಾರಿ ಡೇಟಾಬೇಸ್‌ನೊಂದಿಗೆ API-ಆಧಾರಿತ ಪರಸ್ಪರ ಕಾರ್ಯಸಾಧ್ಯತೆ
- ಕ್ಲೌಡ್ ಆಧಾರಿತ ದತ್ತಾಂಶ ಭದ್ರತೆ ಮತ್ತು ಬ್ಯಾಕಪ್ ವ್ಯವಸ್ಥೆ
- ಸುವ್ಯವಸ್ಥಿತ ಸಾಲ ವಿತರಣೆ, ಮರುಪಾವತಿ ಮತ್ತು ವ್ಯವಹಾರ ನಿರ್ವಹಣೆ

ಈ ಏಕೀಕರಣವು ಸಹಕಾರಿ ಸಂಸ್ಥೆಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಗಮನಾರ್ಹವಾಗಿ ಬಲಪಡಿಸಿದೆ.

## ಸಾಮಾನ್ಯ ಸೇವಾ ಕೇಂದ್ರಗಳಾಗಿ PACS : ಡಿಜಿಟಲ್ ಸಾರ್ವಜನಿಕ ಸೇವೆಗಳ ವಿಸ್ತರಣೆ :

ಡಿಜಿಟಲ್ ಸಹಕಾರಿ ವ್ಯವಸ್ಥೆಯ ಪ್ರಮುಖ ಆಯಾಮವೆಂದರೆ PACSಗಳನ್ನು ಸಾಮಾನ್ಯ ಸೇವಾ ಕೇಂದ್ರ (CSC) ಜಾಲದೊಂದಿಗೆ ಏಕೀಕರಿಸುವುದು. MeitY ಮತ್ತು CSC e-Governance Services ಸಹಯೋಗದಲ್ಲಿ, PACSಗಳಿಗೆ ಗ್ರಾಮೀಣ ಸಮುದಾಯಗಳಲ್ಲಿ 300ಕ್ಕೂ

ಹೆಚ್ಚು ಡಿಜಿಟಲ್ ಸಾರ್ವಜನಿಕ ಸೇವೆಗಳನ್ನು ಒದಗಿಸಲು ಅನುಮತಿ ನೀಡಲಾಗಿದೆ. 2025ರ ವೇಳೆಗೆ:

- 48,000ಕ್ಕೂ ಹೆಚ್ಚು PACSಗಳು CSC ಕಾರ್ಯಾಚರಣೆಗಳನ್ನು ಪ್ರಾರಂಭಿಸಿವೆ.
- ಪ್ರತಿ ತಿಂಗಳು ಸುಮಾರು 30 ಲಕ್ಷ ವ್ಯಕ್ತಿಗಳು ಸಹಕಾರಿ ಸಂಘಗಳ ಮೂಲಕ ಡಿಜಿಟಲ್ ಸೇವೆಗಳನ್ನು ಪಡೆದಿದ್ದಾರೆ.
- ನಬಾರ್ಡ್, NCCT ಮತ್ತು RICMs ಕಾರ್ಯಕ್ರಮಗಳ ಮೂಲಕ ಸಾವಿರಾರು ಗ್ರಾಮೀಣ ಯುವಕರಿಗೆ ಡಿಜಿಟಲ್ ಸೇವಾ ನಿರ್ವಾಹಕರಾಗಿ ತರಬೇತಿ ನೀಡಲಾಗಿದೆ.

ಈ ಮಾದರಿಯು ಅಸ್ತಿತ್ವದಲ್ಲಿರುವ ಸಹಕಾರಿ ಮೂಲಸೌಕರ್ಯದ ಮೂಲಕ ಅಗತ್ಯ ಇ–ಆಡಳಿತ ಸೇವೆಗಳನ್ನು ಕೊನೆಯ ಮೈಲಿಗೂ ತಲುಪಿಸಲು ಅನುವು ಮಾಡಿಕೊಟ್ಟಿದೆ.

**ಆರ್ಥಿಕ ಸೇರ್ಪಡೆ : ಮೈಕ್ರೋ–ಎಟಿಎಂಗಳು ಮತ್ತು ರುಪೇ ಕೆಸಿಸಿ ಏಕೀಕರಣ :**

ಸೌಲಭ್ಯ ವಂಚಿತ ಪ್ರದೇಶಗಳಲ್ಲಿ ಆರ್ಥಿಕ ಪ್ರವೇಶವನ್ನು ಹೆಚ್ಚಿಸಲು, ನಬಾರ್ಡ್ ಮತ್ತು ಸಹಕಾರಿ ಬ್ಯಾಂಕುಗಳು ಬ್ಯಾಂಕ್ ಮಿತ್ರ ಸಹಕಾರಿ ಸಂಘಗಳ ಮೂಲಕ ಸೂಕ್ಷ್ಮ–ಎಟಿಎಂಗಳನ್ನು ನಿಯೋಜಿಸಿವೆ. ಅದೇ ಸಮಯದಲ್ಲಿ, ಸಹಕಾರಿ ಸಂಸ್ಥೆಗಳ ಮೂಲಕ ಜಾರಿಗೊಂಡ ರುಪೇ ಸೌಲಭ್ಯ ಹೊಂದಿದ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳ (ಕೆಸಿಸಿ) ಪರಿಚಯವು ಗ್ರಾಮೀಣ ಸಾಲವನ್ನು ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯೊಂದಿಗೆ ಸಂಯೋಜಿಸಿದೆ, ಇದು ರೈತರಿಗೆ ವಹಿವಾಟುಗಳು, ಹಣ ಹಿಂಪಡೆಯುವಿಕೆಗಳು ಮತ್ತು ಮರುಪಾವತಿಗಳಿಗೆ ತಡೆರಹಿತ ಪ್ರವೇಶವನ್ನು ಒದಗಿಸಿವೆ.

**ರಾಷ್ಟ್ರೀಯ ಸಹಕಾರಿ ಡೇಟಾಬೇಸ್ : ದತ್ತಾಂಶ ಆಧಾರಿತ ನಿರ್ಧಾರ ಕೈಗೊಳ್ಳುವಿಕೆ :**

ರಾಷ್ಟ್ರೀಯ ಸಹಕಾರಿ ಡೇಟಾಬೇಸ್ (NCD) ಇದು ಭಾರತದ ಮೊದಲ ಏಕೀಕೃತ ಸಹಕಾರಿ ದತ್ತಾಂಶ ಸಂಗ್ರಹವಾಗಿದ್ದು, ಪ್ರಸ್ತುತ 8.4 ಲಕ್ಷಕ್ಕೂ ಹೆಚ್ಚು ನೋಂದಾಯಿತ ಸಹಕಾರಿ ಸಂಸ್ಥೆಗಳನ್ನು ಒಳಗೊಂಡಿದೆ.

PACS ನಿಂದ ERP–ರಚಿತ ಮಾಹಿತಿಯು ಸುರಕ್ಷಿತ API ಗಳ ಮೂಲಕ NCD ಗೆ ವರ್ಗಾಯಿಸಲಾಗುತ್ತದೆ, ಇದರಿಂದ:

- ಸಾಕ್ಷ್ಯಾಧಾರಿತ ನೀತಿ ರೂಪಣೆ
- ನಕಲಿ ಮತ್ತು ಹಳೆಯ ದಾಖಲೆಗಳ ನಿವಾರಣೆ
- ಕ್ಷೇತ್ರವಾರು ಅಭಿವೃದ್ಧಿಗಾಗಿ ಸುಧಾರಿತ ಯೋಜನೆ ರೂಪಣೆ
- ರಾಷ್ಟ್ರೀಯ ಮಟ್ಟದ ಕಾರ್ಯಕ್ಷಮತಾ ಮಾನದಂಡ ನಿರ್ಧಾರ

ಈ ದತ್ತಾಂಶ ಏಕೀಕರಣವು ಸಹಕಾರಿ ಆಡಳಿತದಲ್ಲಿ ಹೆಚ್ಚಿನ ಏಕರೂಪತೆ ಮತ್ತು ಪಾರದರ್ಶಕತೆಯನ್ನು ತಂದಿದೆ.

**ಸಾಮಾಜಿಕ ಮತ್ತು ಸಾಂಸ್ಥಿಕ ಪರಿಣಾಮ :**

ಸಹಕಾರಿ ಸಂಸ್ಥೆಗಳ ಡಿಜಿಟಲೀಕರಣವು ಸಾರ್ವಜನಿಕ ಸೇವೆಗಳಿಗೆ ಪ್ರವೇಶವನ್ನು ವಿಸ್ತರಿಸಿದೆ, ಆಡಳಿತಾತ್ಮಕ ದಕ್ಷತೆಯನ್ನು ಸುಧಾರಿಸಿದೆ ಮತ್ತು ಆರ್ಥಿಕ ಸೇರ್ಪಡೆಯನ್ನು ಬಲಪಡಿಸಿದೆ. ಪ್ರಮುಖ ಫಲಿತಾಂಶಗಳು:

- ಸರ್ಕಾರಿ ಯೋಜನೆಗಳಿಗೆ ಸುಲಭ ಪ್ರವೇಶ
- ಸಾಲ ಕಾರ್ಯಾಚರಣೆಗಳಲ್ಲಿ ಹೆಚ್ಚಿದ ಪಾರದರ್ಶಕತೆ
- ಆಡಳಿತಾತ್ಮಕ ವಿಳಂಬ ಮತ್ತು ಹಸ್ತಚಾಲಿತದಲ್ಲಿ ನಡೆಯುವ ದೋಷಗಳ ಕಡಿತ
- ಗ್ರಾಮೀಣ ಯುವಕರಿಗೆ ಹೊಸ ಕೌಶಲ್ಯ ಮತ್ತು ಉದ್ಯೋಗಾವಕಾಶಗಳು
- ಒಂದೇ ಸಹಕಾರಿ ವೇದಿಕೆಯ ಮೂಲಕ ಗ್ರಾಮ ಮಟ್ಟದಲ್ಲಿ ಸುಧಾರಿತ ಸೇವಾ ವಿತರಣೆ

ಡಿಜಿಟಲ್ ಸಹಕಾರಿ ಸಂಸ್ಥೆಗಳು ಈಗ ಹಣಕಾಸು ಮತ್ತು ಆಡಳಿತ ಎರಡರ ಪ್ರಸ್ತುತತೆಯೊಂದಿಗೆ ಬಹುಪಯೋಗಿ ಸೇವಾ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ.

**ಸವಾಲುಗಳು ಮತ್ತು ನಿವಾರಣಾ ಕ್ರಮಗಳು :**

ಗಣನೀಯ ಪ್ರಗತಿಯ ಹೊರತಾಗಿಯೂ, ಡಿಜಿಟಲ್ ಪರಿವರ್ತನೆಯು ಸಂಪರ್ಕ ಅಂತರಗಳು, ಡಿಜಿಟಲ್ ಸಾಕ್ಷರತೆಯಲ್ಲಿನ ವ್ಯತ್ಯಾಸ ಮತ್ತು ನಿರಂತರ ಸಾಮರ್ಥ್ಯ ವೃದ್ಧಿಯ ಅಗತ್ಯದಂತಹ ಸವಾಲುಗಳನ್ನು ಎದುರಿಸುತ್ತಿವೆ.

**ಈ ಸಮಸ್ಯೆಗಳನ್ನು ಪರಿಹರಿಸಲು:**

- NCCT ಮತ್ತು RICMs ವಿಶೇಷ IT ತರಬೇತಿ ಕಾರ್ಯಕ್ರಮಗಳನ್ನು ಪರಿಚಯಿಸಿವೆ.
- ಸೈಬರ್ ಭದ್ರತಾ ಚೌಕಟ್ಟುಗಳು ಮತ್ತು ದತ್ತಾಂಶ ಸಂರಕ್ಷಣಾ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗುತ್ತಿದೆ.
- ರಾಜ್ಯ ಮಟ್ಟದ ನಿಯಂತ್ರಣ ಕೊಠಡಿಗಳು ಮತ್ತು ಸಹಾಯ ಕೇಂದ್ರಗಳು ಕಾರ್ಯಾಚರಣಾ ಬೆಂಬಲವನ್ನು ಒದಗಿಸುತ್ತಿವೆ.
- ಬಳಕೆದಾರರ ಪ್ರತಿಕ್ರಿಯೆಗಳನ್ನು ಒಳಗೊಳ್ಳಲು ERP ಘಟಕಗಳನ್ನು ಕಾಲಕಾಲಕ್ಕೆ ನವೀಕರಿಸಲಾಗುತ್ತದೆ.

ಈ ಕ್ರಮಗಳು ಡಿಜಿಟಲ್ ಪರಿಸರ ವ್ಯವಸ್ಥೆಯ ಸುಸ್ಥಿರತೆಯನ್ನು ಬಲಪಡಿಸುತ್ತವೆ.

**ಮುಂದಿನ ದಾರಿ :**

ಡಿಜಿಟಲ್ ಸಹಕಾರಿ ಸುಧಾರಣೆಗಳ ಮುಂದಿನ ಹಂತವು PACS ವ್ಯವಸ್ಥೆಗಳನ್ನು ಈ ಕೆಳಗಿನ ವ್ಯವಸ್ಥೆಗಳೊಂದಿಗೆ ಏಕೀಕರಿಸುವುದನ್ನು ಪರಿಕಲ್ಪಿಸುತ್ತದೆ:

- ಅನುಸರಣೆಗಾಗಿ (Compliance) GST ಮತ್ತು ಆದಾಯ ತೆರಿಗೆ ಪೋರ್ಟಲ್‌ಗಳು
- ಕೃಷಿ ಮಾರುಕಟ್ಟೆ ಮತ್ತು ಡಿಜಿಟಲ್ ವಾಣಿಜ್ಯಕ್ಕಾಗಿ E-NAM ಮತ್ತು ONDC ವೇದಿಕೆಗಳು
- ಗ್ರಾಮೀಣ ಲಾಜಿಸ್ಟಿಕ್ಸ್ ಸುಧಾರಣೆಗೆ ನವೀಕರಿಸಬಹುದಾದ ಇಂಧನ ಮತ್ತು ಶೀತಲ ಸರಪಳಿ ಉಪಕ್ರಮಗಳು
- ಡೈರಿ, ಮೀನುಗಾರಿಕೆ ಮತ್ತು FPO ಆಧಾರಿತ ಸುಧಾರಣೆಗಳು ಕಟ್ಟಕಡೆಯವರೆಗೆ (end-to-end) ಸೇವಾ ವಿತರಣೆ

ಸಹಕಾರಿ ಸಂಸ್ಥೆಗಳನ್ನು "ಡಿಜಿಟಲ್ ನಾಗರೀಕ ಸೇವಾ ಉದ್ಯಮಗಳು" ಆಗಿ ಪರಿವರ್ತಿಸುವುದು, ಏಕೀಕೃತ ಡಿಜಿಟಲ್ ವಿನ್ಯಾಸದೊಳಗೆ ಬಹುಮುಖ ಸೇವೆಗಳನ್ನು ಒದಗಿಸುವುದು ಇದರ ದೀರ್ಘಕಾಲೀನ ಉದ್ದೇಶವಾಗಿದೆ.

**ಉಪಸಂಹಾರ :**

ಭಾರತದ ಡಿಜಿಟಲ್ ಸಹಕಾರಿ ರೂಪಾಂತರವು ಗ್ರಾಮೀಣ ವಲಯದಲ್ಲಿ ಅತ್ಯಂತ ವಿಸ್ತಾರವಾದ ಮತ್ತು ಸಮಗ್ರ ತಂತ್ರಜ್ಞಾನ–ಚಾಲಿತ ಸುಧಾರಣೆಗಳಲ್ಲಿ ಒಂದನ್ನು ಪ್ರತಿನಿಧಿಸುತ್ತದೆ. ಆಧುನಿಕ ಡಿಜಿಟಲ್ ವ್ಯವಸ್ಥೆಗಳ ಮೂಲಕ ಹಣಕಾಸು, ಆಡಳಿತ ಮತ್ತು ಸೇವಾ ವಿತರಣೆಯನ್ನು ಏಕೀಕರಿಸುವ ಮೂಲಕ, ಸಹಕಾರ ಸಂಸ್ಥೆಗಳು ಕೊನೆಯ ಹಂತದ ಡಿಜಿಟಲ್ ಸಬಲೀಕರಣವನ್ನು ಬೆಂಬಲಿಸುವ ಸಾಮರ್ಥ್ಯವಿರುವ ಪ್ರಮುಖ ಸಂಸ್ಥೆಗಳಾಗಿ ಹೊರಹೊಮ್ಮುತ್ತಿವೆ. ಹಸ್ತಚಾಲಿತ ಕಾರ್ಯಾಚರಣೆಗಳಿಂದ ಸಂಪರ್ಕಿತ, ಡೇಟಾ–ಚಾಲಿತ ಪರಿಸರ ವ್ಯವಸ್ಥೆಯತ್ತ ಬದಲಾವಣೆಯು ಹೆಚ್ಚು ಪಾರದರ್ಶಕ, ಪರಿಣಾಮಕಾರಿ ಮತ್ತು ನಾಗರೀಕ–ಕೇಂದ್ರಿತ ಸಹಕಾರಿ ಭೂದೃಶ್ಯದತ್ತ ಮಹತ್ವದ ಹೆಜ್ಜೆಯನ್ನು ಸೂಚಿಸುತ್ತದೆ.

# ಸರ್ಕಾರ ಮತ್ತು ನಿಬಂಧಕರು, ಸೌಹಾರ್ದ ಆಂದೋಲನಕ್ಕೆ ಪ್ರೋತ್ಸಾಹ ನೀಡಬೇಕು



– ಶ್ರೀ ಸಿ.ಎಸ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರ ರೂಪಿಸಿದ ಮಾದರಿ ಸಹಕಾರ ಕಾಯಿದೆ ರೂಪಿಸಿ (ಚೌದರಿ ಬ್ರಹ್ಮ ಪ್ರಕಾಶ್ ವರದಿ) ರಾಜ್ಯಗಳಿಗೆ ರವಾನಿಸಿದಾಗ, ಕರ್ನಾಟಕ ರಾಜ್ಯ ಒಂದು ಹೊಸ ಸಹಕಾರ ನೀತಿ ರೂಪಿಸಲು ತೀರ್ಮಾನಿಸಿತು, ಅದಕ್ಕಾಗಿ ಒಂದು ಸಮಿತಿ ರಚನೆ ಮಾಡಿ ಈ ಸಮಿತಿ ವರದಿಯನ್ನು ಪಡೆದ ನಂತರ ಸಚಿವ ಸಂಪುಟ, ಆ ನೀತಿಯನ್ನು ಒಪ್ಪಿಗೆ ಗಜೆಟ್‌ನಲ್ಲಿ ಪ್ರಕಟಿಸಿದ ನಂತರ, ಆ ವರದಿಯಲ್ಲಿನ ಶಿಫಾರಸ್ಸಿನಂತೆ, ಕರ್ನಾಟಕ ರಾಜ್ಯಕ್ಕೆ 1959ರ ಕಾಯಿದೆ ಜೊತೆಗೆ ಹೊಸದಾಗಿ ಒಂದು ಕಾಯಿದೆ ರೂಪಿಸಲು ತೀರ್ಮಾನಿಸಿತು. ಅದರಂತೆ ಕರ್ನಾಟಕ ಸೌಹಾರ್ದ ಸಹಕಾರಿಕಾಯಿದೆ 1997 ಎಂದು ಈ ಕೆಳಕಂಡ ಧ್ಯೇಯೋದೇಶಗಳನ್ನು ರೂಪಿಸಿತು.

“ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇರೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ” ಇದಕ್ಕೆ ಪೂರಿತವಾಗಿ ಕಲಂ 5(ಇ) ಈ ಕೆಳಕಂಡಂತೆ ಉಲ್ಲೇಖಿಸುತ್ತದೆ.

“ಒಂದು ಸಹಕಾರಿ ಸಂಘದ ಸಂದರ್ಭದಲ್ಲಿ, ಆ ಸಹಕಾರಿ ಸಂಘವು ಸರ್ಕಾರದಿಂದ ಯಾವುದೇ ಷೇರು ಬಂಡವಾಳ ಮತ್ತು ಯಾವುದೇ ಸಾಲಗಳು ಅಥವಾ ಖಾತರಿ ಮತ್ತು ಯಾವುದೇ ಸಹಕಾರ ಸಂಘದಿಂದ ಸಾಲಗಳು ಮತ್ತು ಖಾತರಿಯನ್ನು ಪಡೆದಿಲ್ಲವೆಂಬುದನ್ನು ತೋರಿಸುವ ದಸ್ತಾವೇಜುಗಳು” ಇರತಕ್ಕದ್ದು ಎಂದಿದೆ.

**ವಿಶೇಷ ಸೂಚನೆ :** ಇತ್ತಿಚೆಗೆ ಸರ್ಕಾರದ ಸಹಕಾರ ಇಲಾಖಾ ಕಾರ್ಯದರ್ಶಿಗಳು ಸಂಯುಕ್ತ ಸಹಕಾರಿ ಈ ಅರ್ಥದಲ್ಲಿ ಸೇರುವುದಿಲ್ಲ, ಏಕೆಂದರೆ ಪ್ರಾಥಮಿಕ ಹಂತದಲ್ಲಿ ಸರ್ಕಾರದಿಂದ ರೂ.10/– ಲಕ್ಷ ಪ್ರಾಥಮಿಕ ಹಣವೆಂದು ನೀಡಿದ್ದು, ಇದರಿಂದ ಸರ್ಕಾರದ ನಿಯಂತ್ರಣ ಇರುತ್ತದೆ ಎಂದಿದ್ದರೆಂದು ತಿಳಿಯಿತು. ಇತ್ತೀಚೆಗೆ ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959ಕ್ಕೆ ತಿದ್ದುಪಡಿ ತಂದು ಸರ್ಕಾರದಿಂದ ಪ್ರತ್ಯಕ್ಷ ಮತ್ತು ಪರೋಕ್ಷ ಎಂಬ ಪದಗಳ ವಿಸ್ತರಣೆ ನೀಡಿ ಯಾವುದೇ ಸಮಯದಲ್ಲಿ ಸಹಾಯಧನ ಪಡೆದಿದ್ದರೆ ಎಂಬ ಪದವನ್ನು ಸೇರಿಸಿದೆ ಆದರೆ ಸೌಹಾರ್ದ ಕಾಯಿದೆಗೆ ಅದನ್ನು ತಿದ್ದುಪಡಿ ಮಾಡಿಲ್ಲ ಇದರ ಜೊತೆಗೆ 1959ರ ಕಾಯಿದೆಯಲ್ಲಿ ಒಂದು ಅಧ್ಯಾಯವನ್ನಾಗಿ ಕಾಯಿದೆಯಲ್ಲಿ ಸೇರಿಸಿ, ಸರ್ಕಾರದ ನೆರವು ನೀಡುವುದು ಒಂದು ಜವಾಬ್ದಾರಿ ಎಂದು ತಿಳಿಸಿದೆ. ಆದರೆ ಅದು ಸೌಹಾರ್ದ ಕಾಯಿದೆಗೆ ಮಾಡಿಲ್ಲ. ಇದರ ಜೊತೆಗೆ ಸೌಹಾರ್ದ ಕಾಯಿದೆಗೆ ತಿದ್ದುಪಡಿ ವಿಮರ್ಶೆ ಮಾಡುವಾಗ ನಿಬಂಧಕರನ್ನು “ಸಂಯುಕ್ತ ಸಹಕಾರಿ” ಮಂಡಳಿ ಸದಸ್ಯರನ್ನಾಗಿ ಮಾಡಬೇಕೆಂಬ ಪ್ರಸ್ತಾವನೆಯನ್ನು ತಿರಸ್ಕರಿಸಲಾಗದೆ. ಆದ್ದರಿಂದ “ಸಂಯುಕ್ತ ಸಹಕಾರಿ” ಒಂದು ಸ್ವಾಯಕ್ತ ಸ್ವಾತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆ. 97ನೇ ಸಂವಿಧಾನದಲ್ಲಿಯೂ, ಸಹಕಾರ ಸಂಸ್ಥೆಗಳನ್ನು ಸ್ವಾಯಕ್ತ ಸಂಯುಕ್ತ ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಗುರುತಿಸಲಾಗಿದೆ.”)

ಮೇಲ್ಕಂಡ ಉಲ್ಲೇಖದಂತೆ ಸೌಹಾರ್ದ ಕಾಯಿದೆಯಡಿ ನೋಂದಾವಣೆಯಾದ ಸಹಕಾರಿಗಳನ್ನು ಸ್ವಾಯಕ್ತ ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಕಾಯಿದೆ ಸೃಷ್ಟಿಪಡಿಸಿರುವುದರಿಂದ, ದಿನ ನಿತ್ಯದ ವ್ಯವಹಾರದಲ್ಲಿಯಾಗಲಿ ಹಣಕಾಸು, ಆಡಳಿತ ಮತ್ತು ವ್ಯವಸ್ಥಾಪನೆಗೆ ಸಂಬಂಧಪಟ್ಟಂತೆ, ಸದಸ್ಯ ಸಹಕಾರಿಗಳ ಮೇಲೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬ ಜವಾಬ್ದಾರಿ ಇರುವುದು, ಕಾಯಿದೆ 53ರಲ್ಲಿ ಸೃಷ್ಟಿಯಾಧ “ಸಂಯುಕ್ತ ಸಹಕಾರಿಗೆ ಮಾತ್ರ.

“ಸಂಯುಕ್ತ ಸಹಕಾರಿ” ತನ್ನ ಕರ್ತವ್ಯ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆಯೇ? ಪ್ರಾರಂಭಿಕ ಹಂತದಲ್ಲಿ, ಅನುದಾನದ ಕೊರತೆಯಿಂದ ಮತ್ತು ಪ್ರಥಮ ಬಾರಿಗೆ, ಸಹಕಾರ ಸಂಸ್ಥೆಯಲ್ಲಿ ನಿಜ ಸ್ವಾಯಕ್ತ ಸ್ವತಂತ್ರ ಮತ್ತು ಸ್ವಯಂ ನಿಯಂತ್ರಣ ಸಂಸ್ಥೆ ಎಂದು ರೂಪಿಸಿರುವುದನ್ನು ಅರ್ಥೈಸಿಕೊಳ್ಳಲು ಚುನಾಯಿತ ಮಂಡಳಿಗೆ ಸುಲಭವಾಗಿರಲಿಲ್ಲ. ಏಕೆಂದರೆ, 1959ರ ಕಾಯಿದೆಯಲ್ಲಿ ನೋಂದಾವಣೆಯಾದ ರಾಜ್ಯಮಟ್ಟದ ಮಹಾಮಂಡಳಗಳಲ್ಲಿ ಮಾದರಿಯಾಗಿದ್ದು, ಅವುಗಳನ್ನು ಅನುಸರಿಸಲು, ಸಂಯುಕ್ತ ಸಹಕಾರಿ ಪ್ರಚೋದಿಸದೆ ಹೊರತು, ತನಗೆ ಶಾಸನಾತ್ಮಕ ಅಧಿಕಾರ ನೀಡಿದ ಬಗ್ಗೆ ದೊಡ್ಡ ಪ್ರಮಾಣದ ಅರಿವು ಇರಲು ಸಾಧ್ಯವಿರಲಿಲ್ಲ. ಅದೇ ಮಾದರಿಯನ್ನು ಅನುಸರಿಸಿ, ಸದಸ್ಯ ಸಹಕಾರಿಗಳನ್ನು ಸಮರ್ಪಕ ಸೂತ್ರಗಳನ್ನು ಕಲಂ 53(7)ರಡಿ ನೀಡಿದ ಅಧಿಕಾರವನ್ನು ಬಳಸಲು ಪ್ರಯತ್ನಿಸಲಿಲ್ಲ, ಏಕೆಂದರೆ ಅನುಭವದ ಕೊರತೆ, ಮಾರ್ಗದರ್ಶನ ನೀಡಲು ನುರಿತ ಸಿಬ್ಬಂದಿ ಅಧಿಕಾರಿಗಳ ಕೊರತೆಯೇ ಮುಖ್ಯಕಾರಣ. ಅದಕ್ಕಾಗಿ ಶಾಸನಾತ್ಮಕವಾಗಿ

ಸೃಷ್ಟಿಸಿದ "ಸಂಯುಕ್ತ ಸಹಕಾರಿ" ಮೇಲೆ ಸರ್ಕಾರ ನಿಯಂತ್ರಣದ ಅಧಿಕಾರ ಇದೆ ಎಂದು ಭಾವಿಸುವುದು ಸರಿಯಿಲ್ಲ. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ, ವಿಧಾನಮಂಡಳ ರಚನೆ ಮಾಡಿದಾಗ ಆಯ್ಕೆಯಾದ ಜನಪ್ರತಿನಿಧಿಗಳಿಗೂ ಅನುಭವ ಇಲ್ಲದಿದ್ದರೂ ಸಚಿವರಾದಾಗ, ಅವರಿಗೆ ಮಾರ್ಗದರ್ಶನ ನೀಡಲು ನುರಿತ ಅನುಭವಿ ಅಧಿಕಾರಿಗಳ ದಂಡೆ ಇರುತ್ತದೆ ಮತ್ತು ಪ್ರತ್ಯೇಕ ಕಾನೂನು ಇಲಾಖೆ ಇದೆ. ಆದ್ದರಿಂದ ಅನುಭವ ಇಲ್ಲದ ಶಾಸಕರು ಮಂತ್ರಿ ಸ್ಥಾನ ಅಲಂಕಾರಿಸಿದರೂ ಅವರು ತೆಗೆದುಕೊಳ್ಳುವ ತೀರ್ಮಾನಗಳಿಗೆ, ಆಡಳಿತ ಮತ್ತು ಕಾನೂನು ಇಲಾಖೆ ಸಹಕಾರಿಯಾಗುತ್ತವೆ ಅದರಲ್ಲೂ ಕೆಲವು ಉದಾಹರಣೆ ನೀಡಬಹುದು. ರಾಯಚೂರು ಜಿಲ್ಲೆಯಲ್ಲಿ 1970ರ ದಶಕದಲ್ಲಿ ಒಬ್ಬ ರಾಜ್ಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ, ಪ್ರಥಮ ಜಿಲ್ಲಾ ಮಟ್ಟದ ಸಭೆಯಲ್ಲಿ ನಾನು ಸಚಿವನಾಗಿರುವುದರಿಂದ ನಿಮಗೆಲ್ಲರಿಗೂ ಒಂದು ವಾರ್ಷಿಕ ವೇತನ ಭಡ್ತಿ ನೀಡುತ್ತೇನೆ ಎಂದು ಆಶ್ವಾಸನೆ ನೀಡಿದರು. ಅದೇ ಜಿಲ್ಲೆಯಿಂದ ಪ್ರಥಮವಾಗಿ ಆಯ್ಕೆಯಾದ ಸಚಿವರು ನನ್ನ ಮಂತ್ರಿ ಸ್ಥಾನದ ನೆನಪಿಗಾಗಿ, ನಿಮ್ಮ ಊರಿಗೆ ಒಂದು ಹೊಸ ಸಹಕಾರ ಸಂಸ್ಥೆ ಸ್ಥಾಪಿಸುತ್ತೇನೆ ಎಂದು ಆಶ್ವಾಸನೆ ನೀಡಿದ್ದರು. ಇಂತಹ ತಪ್ಪುಗಳನ್ನು "ಸಂಯುಕ್ತ ಸಹಕಾರಿ" ಹೊಸದಾಗಿ ರಚನೆಯಾದಾಗ ಅದರಲ್ಲೂ ಶಾಸನಾತ್ಮಕ ಜವಾಬ್ದಾರಿಯಿಂದ, ಕೆಲಸ ತೆಗೆದುಕೊಳ್ಳುವ ಪೂರ್ವದಲ್ಲಿ ಆಡಳಿತದಲ್ಲಿ ತೊಡಕು ಮಾಡಿಕೊಂಡಿರಬಹುದು. ಅದು ಅನುಭವದ ಕೊರಿಕೆಯೇ ಹೊರತು ಬೇಜವ್ಬಾದಾರಿ ಎಂದು ತಿಳಿಯಲಾಗದು.

"ಸಂಯುಕ್ತ ಸಹಕಾರಿ" ಹೊಸ ಸಹಕಾರಿಗಳನ್ನು ರೂಪಿಸುವಾಗ ಸಮರ್ಪಕ ತಿಳುವಳಿಕೆ ನೀಡದೆ, ಅಂದರೆ ಜಾಗೃತ ಸದಸ್ಯರು, ಜವಾಬ್ದಾರಿಯುತ ಮಂಡಳಿ ಮತ್ತು ಬದ್ಧ ನೌಕರನನ್ನು ಹೊಂದುವ ಬಗ್ಗೆ ತರಬೇತಿ ನೀಡಲು ಸಮರ್ಪಕ ಸಿಬ್ಬಂದಿ ಇರಲಿಲ್ಲ. ಸಂಯುಕ್ತ ಸಹಕಾರಿ ಒಂದು, ಸ್ವಾಯುಕ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಎಂಬುದನ್ನು "ಸ್ವಚ್ಚತೆ" ಎಂದು ತಿಳಿದುಕೊಂಡವರೇ ಹೆಚ್ಚಾಗಿದ್ದರು ಅದಕ್ಕಾಗಿ ಪ್ರಾರಂಭಿಕ ಹಂತದಲ್ಲಿ ನೋಂದಾವಣೆಯಿಂದ ಸದಸ್ಯ ಸಹಕಾರಿಗಳು, ಸಮರ್ಪಕ ಮಾರ್ಗದರ್ಶನವಿಲ್ಲದೆ ಸೊರಗಿದವು ಮತ್ತು 1959ರ ಕಾಯಿದೆಯಿಂದ ವರ್ಗಾವಣೆ ಹೊಂದಿದ ಸಹಕಾರಿಗಳು, ಹಳೆ ಕಾಯಿದೆ ಅಡಿಯೇ, ನಿಬಂಧಕರ ಮಾರ್ಗದರ್ಶನಕ್ಕಾಗಿ ಆಶಿಸಿತ್ತಿದ್ದರು. ಇದರ ಮೇರೆಗೆ 1959ರ ಕಾಯಿದೆಯಡಿ, ನಿಬಂಧಕರೇ ನೋಂದಾಯಿಸುವ ಜವಾಬ್ದಾರಿ ಸೌಹಾರ್ದ ಕಾಯಿದೆಯಲ್ಲಿಯೂ ನೀಡಿದ್ದು ಅಮಿಷಗಳಿಗೆ ಒಳಗಾಗಿ ನೋಂದಾಯಿತ ಸಂಸ್ಥೆಗಳು ಪ್ರಾರಂಭಿಕ ಹಂತದಲ್ಲಿಯೇ ಅಡ್ಡದಾರಿ ಹಿಡಿಯಲು ಪ್ರೇರೇಪಿತವಾದವು. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ, ಒಂದು ಸಹಕಾರಿ ನೋಂದಾಯಿಸಲು ಇಂತಿಷ್ಟೆ ಪ್ರಾರಂಭಿಕ ವೆಚ್ಚಗಳನ್ನು ಭರಿಸಲು ಹೇಳಲಾಗುತ್ತಿದ್ದರು ಇದನ್ನು ಆಗಿನ ಸಹಕಾರ ಸಚಿವರೇ ವಿಚಾರಣೆ ನಡೆಸಿದರು. ಇದರಿಂದ ಸೌಹಾರ್ದ ಕಾಯಿದೆಯಡಿ ನೋಂದಾವಣೆ ಸಮಯದಲ್ಲಿಯೇ ದಾರಿತಪ್ಪದಂತೆ ಮಾಡಲಾಯಿತು. ಈಗಲೂ ಈ ವ್ಯವಸ್ಥೆ ನಿಂತಿಲ್ಲ. ಒಂದು ಸಂಸ್ಥೆ ನೋಂದಾಯಿಸಲು ಕಾರ್ಯವ್ಯಾಪ್ತಿಗನುಣವಾಗಿ ಶುಲ್ಕ ನಿಗದಿಪಡಿಸಿದ್ದಾರೆಂದು ತಿಳಿದಿದ್ದೇನೆ ಅಂದರೆ, ನಿಬಂಧಕರೇ ಈ ಆಂದೋಲನ ನೀತಿ ಸೂತ್ರವಾಗಿ ಮುಂದುವರಿಯಲಿಲ್ಲ, ಪ್ರಚೋದನೆ ನೀಡುತ್ತಿಲ್ಲವೇ ಎನಿಸುತ್ತಿದೆ. ಅಂದರೆ ಪ್ರಾರಂಭಿಕ ಹಂತದಿಂದಲೇ ಪಾರದರ್ಶಕ ನೀತಿ ನಿಬಂಧಕರೇ ಮಾಡಬೇಕು. ಪ್ರಾರಂಭಿಕ ಹಂತದಲ್ಲಿಯೇ ಸಹಕಾರಿಗೆ ಪಾರದರ್ಶಕ ನೀತಿ ಏಕೆ ರೂಪಿಸುವುದು ನಿಬಂಧಕರ ಜವಾಬ್ದಾರಿ.

"ಸಂಯುಕ್ತ ಸಹಕಾರಿ"ಗೆ ಪ್ರಾರಂಭಿಕ ಹಂತದಿಂದ ನುರಿತ ಸಿಬ್ಬಂದಿ, ಕ್ಷೇತ್ರ ಸಿಬ್ಬಂದಿ ಕೊರತೆ ಇತ್ತು. ಮತ್ತು "ಸಂಯುಕ್ತ ಸಹಕಾರಿಯು" ಆರ್ಥಿಕ ಸ್ಥಿತಿ, ಸದಸ್ಯರ ವಾರ್ಷಿಕ ವಂತಿಕೆಯಿಂದ ಮತ್ತು ಪ್ರಾರಂಭದಲ್ಲಿ ಶಾಸನ ನಿಧಿಯನ್ನು 1959 ಕಾಯಿದೆಯಡಿ ರಚನೆಯಾದ ಮಹಾಮಂಡಳಕ್ಕೆ ಅದ್ದರಿಂದ ಪ್ರತ್ಯೇಕವಾಗಿ ವಾರ್ಷಿಕವಾಗಿ ಪಡೆಯುವ ವ್ಯವಸ್ಥೆಯಿಂದ ಆರ್ಥಿಕ ಸ್ಥಿತಿ ತೃಪ್ತಿಕರವಾಗಿರಲಿಲ್ಲ. ಸದಸ್ಯ ಸಹಕಾರಿಗಳ ಚುನಾಯಿತ ಪ್ರತಿನಿಧಿಗಳ ಮತ್ತು ಸಿಬ್ಬಂದಿಗೆ ಸಮರ್ಪಕ ತರಬೇತಿ ವ್ಯವಸ್ಥೆ ಮಾಡಲು ಪ್ರಾರಂಭಿಕ ತೊಡಕು ಇತ್ತು ಅದನ್ನು ಈಗ ಸರಿ ಪಡಿಸಲಾಗಿದೆ ಮತ್ತು ನೇರವಾದ ಸಹಕಾರ ಶಿಕ್ಷಣ ನಿಧಿ "ಸಂಯುಕ್ತ ಸಹಕಾರಿಗೆ" ಪಾವತಿಯಾಗುತ್ತಿದೆ. ಆದ್ದರಿಂದ ಈಗಿನ ಸದಸ್ಯ ಸಹಕಾರಿಗಳ ಪದಾಧಿಕಾರಿಗಳ ಮತ್ತು ಸಿಬ್ಬಂದಿಗೆ ನುರಿತ ಮತ್ತು ಪ್ರಾವಿಣ್ಯತೆ ಪಡೆದ ವ್ಯಕ್ತಿಗಳಿಂದ ತರಬೇತಿ ನೀಡಲಾಗುತ್ತಿದೆ. ಸಂಯುಕ್ತ ಸಹಕಾರಿ ನೀಡುವ ತರಬೇತಿ ಉನ್ನತ ಮಟ್ಟದ್ದಾಗಿದೆ. 1959ರ ಕಾಯಿದೆಯಲ್ಲಿ ರಚನೆಯಾದ ಮಹಾಮಂಡಳಗಳು ನೀಡುವ ತರಬೇತಿಗಿಂತ ಉತ್ತಮವಾಗಿದೆ ಎಂದು ಹೇಳಲು ಯಾವುದೇ ಭಿನ್ನಮತವಿಲ್ಲ. ಇದರ ಜೊತೆಗೆ, ಸಂಯುಕ್ತ ಸಹಕಾರಿಯ ಹಿರಿಯ ಸಿಬ್ಬಂದಿಯೇ, ತರಬೇತಿ ಪೂರ್ಣಜವಾಬ್ದಾರಿ ನಿರ್ವಹಿಸಬೇಕು. ಏಕೆಂದರೆ, ಸೌಹಾರ್ದ ಕಾಯಿದೆ ಆಶಯವನ್ನು ನಿರ್ವಹಿಸಲು ಸೌಹಾರ್ದ ಸಿಬ್ಬಂದಿಗೆ ಮಾತ್ರ ತಿಳುವಳಿಕೆ ಇದೆ. ಈಗಿನ ಸಿಬ್ಬಂದಿ ವ್ಯಕ್ತಿ ಪರ ಪ್ರವೃತ್ತಿ ಹೋಂದಿದ್ದಾರೆ, ಹೆಚ್ಚಿನ ಸಿಬ್ಬಂದಿ ಸಂಯುಕ್ತ ಸಹಕಾರಿ ಮಂಡಳಿಗೆ ವಿಧೇಯರಾಗಿದ್ದಾರೆಯೋ ಹೊರತು ಮಂಡಳಿ ನಿರ್ದೇಶಕರಿಗೆ ಅಲ್ಲ. ಸಿಬ್ಬಂದಿಯನ್ನು ಅಧಿಕಾರಿಗಳಂತೆ ನಡೆಸಿಕೊಳ್ಳುತ್ತಾರೆ, ಸೇವಕರೆಂದಲಿ ಸಂಯುಕ್ತ ಸಹಕಾರಿ ಸಿಬ್ಬಂದಿಯಲ್ಲಿ ಹೆಚ್ಚಿನ ಸಂಖ್ಯೆ ಸಂಸ್ಥೆಗೆ ಬದ್ಧರಾಗಿದ್ದಾರೆ. ಆದರೂ ಸೌಹಾರ್ದ ಕಾಯಿದೆಯೂ ಇದೇ ಸಮಾಜದ ಒಂದು ಭಾಗವಾಗಿದೆ. ಆದ್ದರಿಂದ ಸಮಾಜದಲ್ಲಿ ನಡೆಯುವ ಆಗು ಹೋಗುಗಳು ಈ ಸಂಸ್ಥೆಯ ಮೇಲೂ ಪ್ರಭಾವ ಬೀರುತ್ತದೆ. ಪ್ರಮಾಣಿಕತೆ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Permitted to Post under Periodical Post as per the Letter G3/14/RNP/2024-25 DATE 29.09.2025



ಸಂಸ್ಥೆಯ ಒಂದು ಭಾಗವಾಗಿದೆ. ಅದಕ್ಕಾಗಿ ಆಡಳಿತವೂ ಪಾರದರ್ಶಕವಾಗಿದೆ. ಹೊಸಚಿಂತನೆ ಮಾಡುವ ಮಂಡಳಿ ಮತ್ತು ಅಧಿಕಾರಿಗಳ ಲಭ್ಯವಿದ್ದಾರೆ.

"ಸಂಯುಕ್ತ ಸಹಕಾರಿ" ಮೂಲಕೊರತೆ ಎಂದರೆ, ಅವರು ತಮ್ಮ ವೈಯಕ್ತಿಕ ವಿಷಯ ಮತ್ತು ಅವರು ಪ್ರತಿನಿಧಿಸುವ ಸಹಕಾರಿಗೆ ಸಂಬಂಧಪಟ್ಟಂತೆ ಸ್ವಾರ್ಥತನ ಕೈಬಿಡಬೇಕು.

ಸಹಕಾರಿ ಸೇವೆ ಉಚಿತ ಮತ್ತು ಗೌರವಾನ್ವಿತ ಎಂದು ತಿಳಿಯಬೇಕು. ಆದರೆ, ಸ್ವಂತ ವಿಷಯಕ್ಕೆ ಬಂದಾಗ ರಾಜ್ಯ ಬೇರೆ ಮಹಾಮಂಡಳಗಳನ್ನು ಸಂಸ್ಥೆಗಳು ಮತ್ತು ಸಚಿವರ ಭತ್ಯೆಗಳಿಗೆ ಮಾದರಿಯಾಗ ಪರಿಗಣಿಸಿವೆಂದು ಅತ್ಯವಶ್ಯಕ ಸೌಲಭ್ಯಗಳಿಗೆ ಮಾತ್ರ ಹಕ್ಕನ್ನು ಚಲಾವಣೆ ಹಾಗೂ ರಾಜ್ಯಕ್ಕೆ ಮಾದರಿಯಾಗಬೇಕು. ಮಂಡಳಿ ಮತ್ತು ನಿರ್ದೇಶಕರು ಮತ್ತು ಶಿಕ್ಷಣ ಸಮಿತಿ ಸದಸ್ಯರಿಗೆ, ಕಾನೂನನ್ನೂ ಅರ್ಥೈಸಿ ನೀತಿ ತುಂಬಬೇಕು ಏಕೆಂದರೆ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳಿಗೆ ಮಾದರಿಯಾಗಿರಬೇಕು. ಆದರೆ ಸ್ವಾಯತ್ತ ಸಹಕಾರಿಯೋ ಅದು ತಪ್ಪು ಮಾಡಿದರೆ ಸದಸ್ಯ ಸಹಕಾರಿಗಳು ಅದನ್ನು ಮಾಡಲು ಪ್ರೇರೇಪಿಸುತ್ತದೆ. ಈ ಹಿಂದೆ ಸಂಯುಕ್ತ ಸಹಕಾರಿ, ಚುನಾವಣೆ ನಡೆಸಲಾಗದ ಕಾರಣದಿಂದ ಉಚ್ಚನ್ಯಾಯಲಯದಲ್ಲಿ ದಾವೆ ಹೂಡಿ 5 ವರ್ಷಕ್ಕೆ ಬದಲಾಗಿ 6 1/2 ವರ್ಷ ನಿರ್ದೇಶಕರಾಗಿದ್ದರು ಇದು ಮಾದರಿಯಲ್ಲ.

ಈ ಲೇಖನದ ಮುಖ್ಯ ಉದ್ದೇಶಕಾಯಿದೆ ಕಲಂ 53(7)ರಲ್ಲಿ ಮತ್ತು ಇನ್ನಿತರ ಕಲಂಗಳಲ್ಲಿ ಸಂಯುಕ್ತ ಸಹಕಾರಿಗೆ ನೀಡಿದ ಜವಾಬ್ದಾರಿ, ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು ಮತ್ತು ಸದಸ್ಯ ಸಹಕಾರಿಗಳು ಅದರಂತೆ ಕಾರ್ಯನಿರ್ವಹಿಸದಿದ್ದಾಗ ತುರ್ತಾಗಿ ಕ್ರಮ ಜರುಗಿಸಬೇಕು. ಸಂಧಾನ ಮಾಡಿದಲ್ಲಿ ಕಾನೂನಾತ್ಮಕ ಕ್ರಮ ಜರುಗಿಸಿ ಕಾನೂನು ಪಾಲಿಸದಿದ್ದರೆ, ಶಿಕ್ಷೆ ನೀಡಲು ತುರ್ತುಕ್ರಮ ಅವಶ್ಯಕ ಇದರಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರು ತಮ್ಮತನ ಪ್ರದರ್ಶಿಸಬಾರದು.

ಕಾಯಿದೆಯಲ್ಲಿ ಶಾಸನಾತ್ಮಕ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ನೀಡಿದ್ದರೂ, ಕಾಯಿದೆಯಲ್ಲಿ ರೂಪಿಸಿದ ಸಹಕಾರಿ ನೋಂದಾಯಿಸುವ ನಿಬಂಧಕರನ್ನು ಮರೆಯಲಾಗದು. ಆದರೆ, ಅವರು ಸಂಯುಕ್ತ ಸಹಕಾರಿಗೆ ಮಾರ್ಗದರ್ಶಕ, ತತ್ವಜ್ಞಾನಿ ಮತ್ತು ಸ್ನೇಹಿತನ ರೀತಿ ಕಾರ್ಯನಿರ್ವಹಿಸಬೇಕು. ನಿಯಂತ್ರಣ ಮಾಡುತ್ತೀವೆಂಬ ಭಾವನೆಯಿಂದ ಅಲ್ಲ. ಅದರಂತೆ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶಕ ತತ್ವಜ್ಞಾನಿ ಮತ್ತು ಸ್ನೇಹಿತನಂತೆ ಕಾರ್ಯನಿರ್ವಹಿಸಿದಾಗ ಮಾತ್ರ ಸೌಹಾರ್ದ ಕಾಯಿದೆ ಪೂರ್ಣ ಪ್ರಮಾಣದ ಯಶಸ್ವಿಗಳಿಸಲು ಸಾಧ್ಯ ಇದಕ್ಕೆ ನಿಬಂಧಕರು ತನ್ನ ಕ್ಷೇತ್ರ ಸಿಬ್ಬಂದಿಗೆ ಸೂಕ್ತ ಮಾರ್ಗದರ್ಶನ ನೀಡಿ, ಈ ಆಂದೋಲನ ಯಶಸ್ವಿಗೊಳಿಸಲು ಪ್ರಯತ್ನಿಸಬೇಕೆ ಹೊರತು, ವೇದಿಕೆಗಳಲ್ಲಿ ಆಂದೋಲನಕ್ಕೆ ಕೆಟ್ಟ ಅಭಿಪ್ರಾಯ ಬರದಂತೆ ಮಾರ್ಗದರ್ಶನವಾಗಬೇಕು. ಇದರ ಜೊತೆಗೆ ಸರ್ಕಾರದ ಪ್ರತ್ಯಕ್ಷ ಪರೋಕ್ಷ ನೆರವು ಪಡೆಯದೇ, ಸದಸ್ಯರ ಆರ್ಥಿಕ ಬೆಳವಣಿಗೆಗೆ ರೂಪಿಸಿದ ಸಹಕಾರಿಗಳ ಬೆಳವಣಿಗೆಗೆ ಸಹಕರಿಸುವುದು ಅತ್ಯವಶ್ಯಕ ಹಾಗೂ ದಾರಿತಪ್ಪಿದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿ ಸರಿದಾರಿಗೆ ತರಲು ಮಾಡುವ ಪ್ರಯತ್ನಕ್ಕೆ ನಿಬಂಧಕರು ಮಾರ್ಗದರ್ಶನ ನೀಡಬೇಕು.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003